

# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34** **ಚೈತ್ರ – April 2007** **ಸಂಚಿಕೆ : 01**

ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

**ಹಾಗೂ**

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ವಿದ್ವಾನ್ ಶ್ರೀ ಗುಂಜಳ್ಳಿ. ನರಹರಿ ಆಚಾರ್ಯ**
**ಶ್ರೀ ಬಿ.ಎ. ಪಾಟೀಲ್**

ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ** – 08512-279887 — **ಮೊಬೈಲ್** – 099857-03033

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ** – 9341387714, 9342651516

## ವಿಷಯಸೂಚೀ

ಮಂಗಳಾಚರಣೆ ೦೩
ಸಂಪಾದಕೀಯ ೦೪

**ಲೇಖನಮಾಲಾ**

ಹಂಪಿ ವಿರೂಪಾಕ್ಷ ದೇವಾಲಯದ
ಮಹಾರಂಗಮಂಟಪದ ಒಳಭಿತ್ತಿಚಿತ್ರ :
ಶ್ರೀವಿದ್ಯಾರಣ್ಯರದೋ? ಶ್ರೀವ್ಯಾಸರಾಜರದೋ? — ಡಾ. ಆರ್.ಹೆಚ್. ಕುಲಕರ್ಣಿ ೦೬
ಆಧುನಿಕರ ದೃಷ್ಟಿಯಲ್ಲಿ ಋಗ್ವೇದಕಾಲೀನ
ದೇವತೆಗಳು - ಭಾಗ - ೨ : ಇಂದ್ರ — ಡಾ. ಕೊರಟಗೆರೆ ವಾಸುದೇವಾಚಾರ್ಯ ೧೭
ಏಕಾದಶೀ ಮಹಾತ್ಮೆ — ಬಿ. ಸತ್ಯನಾರಾಯಣಾಚಾರ್ಯ ೨೨
ಲಿಕುಚ ವಂಶದವರಿಂದ ಮಧ್ವೋಕ್ತಿ — ಎನ್.ಆರ್. ದ್ವಾರಕಾನಾಥಾಚಾರ್ಯ ೨೬
ಗೀತಾವಿವೃತಿ — ಡಾ. ಆರ್.ಜಿ. ಮಾಳಗಿ ೩೦
ಹುಲಿಯ ಪೊದೆಯಿಂದ ಎದ್ದು ಬಂದ ಪ್ರಾಣೇಶ — ಕಾಕೋಳು ಸರೋಜಮ್ಮ ೩೬
ತಮಿಳುನಾಡಿನ ನವಗ್ರಹ ದೇವಾಲಯಗಳು - ೪ — ಸಂಗ್ರಹಲೇಖನ : ಸೂರೀಂದ್ರ ೪೦
ಶ್ರೀಹರಿದಾಸಸಾಹಿತ್ಯದ ಮೂಲ — ವಾದಿರಾಜ ದೇಶಪಾಂಡೆ ೪೩
ಪರ್ಯಟನೆ ೪೭

**[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]**

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕ-ವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ.

**ತಾವು ಎಸ್.ಎಂ.ಎಸ್. ಕಳುಹಿಸಬೇಕಾದ ಮೊಬೈಲ್ ಸಂಖ್ಯೆ**

**9341387714**

# ಮಂಗಳಾಚರಣೆ

ಚೈತ್ರಾದಾವುಷಸ್ಸ್ಮರನ್‌ರಘುಪತಿಂ ಚೋತ್ಥಾಯ ಚಂದ್ರಂ ಸ್ಮರೇತ್ ।
ವೃದ್ಧಾಜ್ಞಾಮನುಗೃಹ್ಯ ನಿಬಂಕದಲಂ ಪ್ರಾಸಾಜ್ಯಪಾತ್ರೇ ಸ್ವಕಮ್ ॥

ವಕ್ತ್ರಂ ವೀಕ್ಷ್ಯ ಚ ದರ್ಪಣೇ ಸುಮನಸೋ ದೈವಜ್ಞಮಿತ್ರಾನ್ವಿತಃ ।
ಪಂಚಾಂಗಂ ಶ್ರುಣುಯಾನ್ನೃಪಃ ಪ್ರಮುದಿತಃ ಸಂಭಾವ್ಯ ಮೌಹೂರ್ತಿಕಾನ್ ॥

ಅಬ್ದಾದೌ ಮಿತ್ರಸಂಯುಕ್ತೋ ಮಂಗಲಸ್ನಾನಮಾಚರೇತ್ ।
ವಸ್ತ್ರೈರಾಭರಣೈರ್ದೇಹಮಲಂಕೃತ್ಯ ತತಃ ಶುಚಿಃ ॥ ೧ ॥

ದೇವದ್ವಿಜಾನ್ ಸಮಭ್ಯರ್ಚ್ಯ ಪ್ರಗೃಹ್ಯ ಬ್ರಾಹ್ಮಣಾಶಿಷಃ ।
ಭಕ್ಷಯಿತ್ವಾ ನಿಂಬಪತ್ರಂ ಶೃಣುಯಾದ್ವರ್ಷಜಂ ಫಲಮ್ ॥ ೨ ॥

ವತ್ಸರಾದೌ ವಸಂತಾದೌ ಬಲಿರಾಜ್ಯೇ ತಥೈವ ಚ ।
ತೈಲಸ್ನಾನಮಕುರ್ವಾಣೋ ನರಕಂ ಪ್ರತಿಪದ್ಯತೇ ॥ ೩ ॥

ತೈಲೇ ಲಕ್ಷ್ಮೀರ್ಜಲೇ ಗಂಗಾ ವತ್ಸರಾದಿತಿಥೌ ಶುಭೇ ।
ಅಲಕ್ಷ್ಮೀಪರಿಹಾರಾರ್ಥಂ ಮಂಗಲಸ್ನಾನಮಾಚರೇತ್ ॥ ೪ ॥

ತೈಲಾಭ್ಯಂಗಸ್ನಾನಮಾದೌ ಚ ಕೃತ್ವಾ ಪೀಯೋಷೋತ್ಥಂ ಪಾರಿಭದ್ರಸ್ಯ ಪತ್ರಮ್ ।
ಭಕ್ಷೇತ್ಸೌಖ್ಯಂ ಮಾನದಂ ವ್ಯಾಧಿನಾಶಂ ದೀರ್ಘಾಯುಷ್ಯಂ ಲಭ್ಯತೇ ವರ್ಷಮೂಲೇ ॥ ೫ ॥

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।
ಸರ್ವಾರಿಷ್ಟವಿನಾಶಾಯ ನಿಬಂಕಂ ದಲಭಕ್ಷಣಮ್ ॥ ೬ ॥

## ಶ್ರೀಸುಶಮೀಂದ್ರವಾಣಿ

**"ಸುಖಮೇವ ಮೇ ಸ್ಯಾತ್ ದುಃಖಂ ಮನಾಗಪಿ ಮಾ ಭೂತ್"**

''ಸುಖವೇ ಸದಾ ಎನಗಿರಲಿ, ದುಃಖವು ಸ್ವಲ್ಪವೂ ಎನಗಾಗುವುದು ಬೇಡ'' ಎಂದು ಎಲ್ಲಾ ಮನುಜರೇನೋ ಅಪೇಕ್ಷೆಪಡುತ್ತಾರೆ. ಹಾಗಾಗಲು ಸಾಧ್ಯವಿಲ್ಲ. ಆದರೆ, ದುಃಖ-ಮಿಶ್ರಿತವಾದ ಸುಖಜೀವನ ನಡೆಸುವವರಲ್ಲಿ ಇರುವ ಮಾನಸಿಕ ದೃಢತೆ ಕೇವಲ ಸುಖಪಡುವವರಲ್ಲಿ ಇರುವುದಿಲ್ಲ. ಇದೇ ಭಾರತೀಯರ ನೆಮ್ಮದಿಯ ಜೀವನದ ಗುಟ್ಟು. ಇದನ್ನೇ ಬೇವು-ಬೆಲ್ಲವನ್ನು ಹೊಸವರುಷವಾದ ಯುಗಾದಿಯಂದು ತಿನ್ನುವ ಮೂಲಕ ಭಾರತೀಯರು ವಿಶ್ವಕ್ಕೆ ತಿಳಿಯಪಡಿಸುತ್ತಾರೆ. ಹೊಸವರುಷವು ತಮ್ಮೆಲ್ಲರಿಗೂ ಸನ್ಮಂಗಳವನ್ನುಂಟುಮಾಡಲಿ.




# ಸಂಪಾದಕೀಯ

ಜನರಿಗೆ ಅರ್ಥವಾಗುವ ಸಮಸ್ತ ಸಾಹಿತ್ಯಗಳಿಗೂ ಮಾತೃಭಾಷೆಯು ಉತ್ತಮ ಮಾಧ್ಯಮವಾಗುತ್ತದೆ. ನಮ್ಮ ಹಿರಿಯರ ಅಮೂಲ್ಯ ಸಂದೇಶಗಳು ನಮ್ಮನ್ನು ತಲುಪಲು ಮಾತೃಭಾಷೆಗಳೂ ಕಾರಣ. ನಮ್ಮ ಸಂಸ್ಕೃತಿಯ ವೇದ-ಪುರಾಣ-ಉಪನಿಷತ್ತುಗಳೆಲ್ಲದರ ಸಾರಗಳು ಸಂಸ್ಕೃತದ ಭದ್ರಕೋಟೆಯಲ್ಲಿ ಸುರಕ್ಷಿತವಾಗಿದ್ದರೂ, ಸಂಸ್ಕೃತ ಸ್ಪರ್ಶ ಹೆಚ್ಚಿನ ಜನರಿಗಿಲ್ಲದ ಕಾರಣ, ಪ್ರಾಂತೀಯ ಭಾಷೆಗಳಲ್ಲಿ ಆ ಸಾಹಿತ್ಯಗಳೆಲ್ಲವೂ ಪ್ರಕಟಗೊಂಡವು. ಪ್ರಾಂತೀಯ ಭಾಷೆಗಳಲ್ಲಿ ಕೆಲವೆಡೆ ಸಂಸ್ಕೃತದ ಪ್ರೌಢತೆಯನ್ನು ಪ್ರತಿಬಿಂಬಿಸುವ ಶಬ್ದಗಳ ಕೊರತೆಯಿಂದ ಸಂಸ್ಕೃತದ ಶಬ್ದಗಳನ್ನೇ ಉಪಯೋಗಿಸಿ ನಮ್ಮ ಹಿರಿಯರು ಚಂದದ ಸಾಹಿತ್ಯಗಳನ್ನು ರಚಿಸಿದರು. ತೆಲುಗು ಭಾಷೆಯಲ್ಲಿನ ಪ್ರಾಚೀನ, ಮನಮೋಹಕ ಪದ್ಯಗಳು ಸಂಸ್ಕೃತಮಯವಾಗಿರುವುದನ್ನು ನಾವು ಕಾಣಬಹುದು. ಹೀಗೆ ಸಂಸ್ಕೃತವನ್ನು ಮಾತೃಭಾಷೆಯೊಂದಿಗೆ ಜೋಡಿಸಿ, ಉತ್ತಮ ಸಾಹಿತ್ಯವುಳ್ಳ ಗ್ರಂಥರಾಶಿಗಳ ಸೃಷ್ಟಿಯಾಯಿತು. ಸಂಸ್ಕೃತವು ಯಾವುದೇ ಪ್ರಾಂತೀಯ ಭಾಷೆಯೊಡನೆ ಬೆರೆತಾಗ ಪ್ರಾಂತೀಯ ಭಾಷೆಯ ಸೌಂದರ್ಯ ಇಮ್ಮಡಿಯೇ ಆಗುತ್ತದೆ. ಆದರೆ ಇಂದು ಅನೇಕ ಪ್ರಾಂತೀಯ ಭಾಷಾಭಿಮಾನಿಗಳು ಸಂಸ್ಕೃತದ ಸ್ಪರ್ಶವಿಲ್ಲದ ಭಾಷೆ ತಮ್ಮದೆಂಬಂತೆಯೂ ಹಾಗೂ ಪ್ರಾಂತೀಯ ಭಾಷೆಯಲ್ಲಿ ಈಗಾಗಲೇ ಉಪಯೋಗಿಸಲ್ಪಡುತ್ತಿರುವ ಸಂಸ್ಕೃತ ಶಬ್ದಗಳೂ ಆಯಾ ಪ್ರಾಂತೀಯ ಭಾಷೆಗೆ ಸಂಬಂಧಪಟ್ಟದೆಂಬಂತೆ ವರ್ತಿಸುತ್ತಾರೆ. ಅದು ಎಂದಿಗೂ ಸಾಧ್ಯವಾಗುವುದಿಲ್ಲ. ಏಕೆಂದರೆ, ಎಲ್ಲರಿಗೂ ತಿಳಿದ 'ನೀರು' ಶಬ್ದವು ಸಂಸ್ಕೃತದ ನಪುಂಸಕಲಿಂಗದ ಶಬ್ದವಾಗಿದೆ (ನೀರಮ್). ಆದರೆ ಇದನ್ನು ಕನ್ನಡವೆಂದೇ ಭಾವಿಸುತ್ತಾರೆ. ಇಂತಹ ಸಾವಿರಾರು ಉದಾಹರಣೆಗಳನ್ನು ಇತರೇ ಭಾಷೆಗಳಲ್ಲೂ ಕಾಣಬಹುದು. ಈ ಕಾರಣ, ದೇವವಾಣಿಯನ್ನು ಹೊರತುಪಡಿಸಿ ಅರ್ಧದಷ್ಟು ಕಾರ್ಯಗಳನ್ನು ಪ್ರಾಂತೀಯ ಭಾಷೆಗಳಿಂದ ಮಾಡಲು ಸಾಧ್ಯವಿಲ್ಲ. ಬದಲಿಗೆ ಈ ದೇವವಾಣಿಯನ್ನು ಉಪಯೋಗಿಸಿ ಇನ್ನಷ್ಟು ಉತ್ತಮ ಸಾಹಿತ್ಯವನ್ನು ಕೊಡುವತ್ತ ಗಮನ ಕೊಟ್ಟಲ್ಲಿ ಆಗುವ ನಷ್ಟವೇನು? ಇದರಿಂದ ಸಂಸ್ಕೃತಕ್ಕೂ ಪ್ರೋತ್ಸಾಹ ಸಿಕ್ಕಂತೆ ಆಗುತ್ತದೆ.

ಕುಮಾರವ್ಯಾಸ, ಮಾಸ್ತಿ, ದ.ರಾ. ಬೇಂದ್ರೇಯವರೇ ಮೊದಲಾದವರ ಸಾಹಿತ್ಯದ ಸೊಗಡಿಗೆ ಸಂಸ್ಕೃತದ ಸುಗಂಧವೂ ಕಾರಣ. ಮುತ್ತಿನ ಸರವು ಸುಂದರವಾಗಿ ಕಂಡರೂ ಅದೊಂದು ಸರವಾಗಲು ಸುವರ್ಣದ ಸಹಕಾರವು ಬೇಕೇ ಬೇಕು. ಇದರಂತೆಯೇ ನಮ್ಮ ಪ್ರಾಂತೀಯ ಭಾಷೆಗಳಿಗೂ ಸುವರ್ಣ(ಸು, ವರ್ಣ = ಉತ್ತಮ ಅಕ್ಷರವಾದ ಸಂಸ್ಕೃತ)ದ ಲೇಪನ ಹೊಸಪ್ರಕಾಶವನ್ನು ತಂದುಕೊಡುವುದರಲ್ಲಿ ಸಂಶಯವಿಲ್ಲ.

**ವಿಳಾಸ ಬದಲಾವಣೆ ಮಾಡುವವರು ಹೊಸ ವಿಳಾಸ, ಎಲ್.ನಂ. ಜೊತೆಗೆ ಹಳೆಯ ವಿಳಾಸವನ್ನೂ ತಿಳಿಸಬೇಕು. ಇಲ್ಲದಿದ್ದಲ್ಲಿ ವಿಳಾಸ ಬದಲಾವಣೆ ಮಾಡಲಾಗುವುದಿಲ್ಲ.**

## ಖಾಸಗಿ ರಾಯರ ಮಠಗಳಿಗೆ
## ಮಂತ್ರಾಲಯ ಮಠದಿಂದ ಸಹಾಯ



## ಖಾಸಗಿ ರಾಯರ ಮಠಗಳು ಮಂತ್ರಾಲಯ ಮಠದ ವಶಕ್ಕೆ

ಕಲಿಯುಗದ ಕಾಮಧೇನು, ಕಲ್ಪವೃಕ್ಷರೆಂದು ಖ್ಯಾತರಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ೩೩೫ ವರ್ಷಗಳ ಹಿಂದೆ ಸಶರೀರರಾಗಿ ಮಂತ್ರಾಲಯ ಕ್ಷೇತ್ರದಲ್ಲಿ ಬೃಂದಾವನ ಪ್ರವೇಶ ಮಾಡಿದಾಗಿನಿಂದ ಮಂತ್ರಾಲಯದಿಂದ ಮೂಲ ಬೃಂದಾವನದ ಮೃತ್ತಿಕೆಯನ್ನು ಪಡೆದು, ಅನೇಕ ಮೃತ್ತಿಕಾ ಬೃಂದಾವನಗಳು ರಾಷ್ಟ್ರದಾದ್ಯಂತ ನಿರ್ಮಾಣವಾಗಿವೆ. ಅನೇಕ ಮಠಗಳು ಅಭಿವೃದ್ಧಿಯ ಪಥದತ್ತ ಸಾಗಿದ್ದರೆ, ಮತ್ತೆ ಕೆಲವು ಮೃತ್ತಿಕಾ ಬೃಂದಾವನದ ಮಠಗಳನ್ನು ಕಟ್ಟಿದವರು ನಿರ್ವಹಣೆಯನ್ನು ಮಾಡಲಾಗದೆ ಕೈಚೆಲ್ಲಿ ಕುಳಿತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಮಠಗಳವರು ನಮ್ಮನ್ನು ಸಂಪರ್ಕಿಸಿದಲ್ಲಿ ಸಕಲ ವ್ಯವಸ್ಥೆಯನ್ನೂ ಮಾಡಿ, ಮಂತ್ರಾಲಯದ ಆಡಳಿತ ವ್ಯಾಪ್ತಿಗೆ ಅವುಗಳನ್ನು ಪಡೆದು ಅಭಿವೃದ್ಧಿಪಡಿಸಲಾಗುವುದು.

**ರಾಯರ ಹೆಸರಿನಲ್ಲಿ ಪ್ರಾರಂಭವಾದ ಮಠವು ರಾಯರಿಗೇ ಸೇರಬೇಕಲ್ಲವೆ?**

ಸಂಪರ್ಕಿಸಬೇಕಾದ ವಿಳಾಸ

**ಕಾರ್ಯನಿರ್ವಾಹಕ ವ್ಯವಸ್ಥಾಪಕರು**

ನಂ. 4, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಸೀತಾಪತಿ ಅಗ್ರಹಾರ, ಹೊಸತರಗುಪೇಟೆ, ಬೆಂಗಳೂರು - 560 002
**ದೂರವಾಣಿ : 080-26708642**
**ಮೊಬೈಲ್ : 9342651516, 9343798112, 9986991411**






# ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಭಿತ್ತಿ ಚಿತ್ರ : ಶ್ರೀವಿದ್ಯಾರಣ್ಯರದೋ? ಶ್ರೀವ್ಯಾಸರಾಯರದೋ?

■ ಡಾ. ಆರ್.ಹೆಚ್. ಕುಲಕರ್ಣಿ
೧-೧೪೭, (ಹೊಸ ನಂ. ೭೯೬), ೩ನೇ ಅಡ್ಡರಸ್ತೆ, ಆಶ್ರಮ ರಸ್ತೆ, ಹಿನಕಲ್, ಮೈಸೂರು - ೫೭೦ ೦೧೭

**ಕ**ರ್ನಾಟಕದ ಭಿತ್ತಿಚಿತ್ರ ಕಲೆಗೆ ಮತ್ತೊಂದು ಬಾರಿ ಹೊಸ ಆಯಾಮ ದೊರೆತದ್ದು ವಿಜಯನಗರದ ಕಾಲದಲ್ಲಿ. ವಾಸ್ತುಕಲೆ, ಶಿಲ್ಪಕಲೆ, ಗಾರೆಕಲೆಯೊಂದಿಗೆ-ಚಿತ್ರಕಲೆಯೂ ಕೂಡಾ ತನ್ನದೇ ಆದ ತಾಂತ್ರಿಕ ಪರಂಪರೆಯೊಂದಿಗೆ ಬೆಳೆಯಿತು. ಹಲವಾರು ವಿಷಯ, ವ್ಯಾಪ್ತಿಗಳಿಗೆ ಸೇರಿದ ಚಿತ್ರಗಳು ಹಂಪಿ ವಿರೂಪಾಕ್ಷ ದೇವಾಲಯ-ಗಳ ಒಳಗೋಡೆಯ ಮೇಲೆ ಒಳಮಾಳಿಗೆಗಳ ಮೇಲೆ ಚಿತ್ರಿತವಾಗಿದ್ದು, ಹಲವಾರು ಉದಾಹರಣೆಗಳಿಂದ ತಿಳಿದುಬರುತ್ತದೆ. ಹಂಪೆಯ ವಿರೂಪಾಕ್ಷ ದೇವಾಲಯ, ಲೇಪಾಕ್ಷಿ, ತಾಡಪತ್ರಿ ಹಾಗೂ ಆನೆಗೊಂದಿಯಲ್ಲಿನ ಮಠಗಳಲ್ಲಿಯ ಚಿತ್ರಗಳನ್ನು ಇಲ್ಲಿ ಉದಾಹರಿಸಬಹುದು. ಈ ಕಾಲದಲ್ಲಿಯೇ ವಿಜಯನಗರದ ಚಿತ್ರಕಲೆಯಲ್ಲಿ ವಿಶಿಷ್ಟ-ವಾದ ಶೈಲಿಯೊಂದರ ಬೆಳವಣಿಗೆ ಆದದ್ದು.

ಈ ಪ್ರಬಂಧದ ಮುಖ್ಯ ಚರ್ಚಾವಸ್ತುವಾದ ಯತಿಗಳ ಚಿತ್ರ ವಿದ್ಯಾರಣ್ಯರದೋ? ಅಥವಾ ವ್ಯಾಸರಾಯರದೋ? ಎನ್ನುವುದನ್ನು ವಿವರವಾಗಿ ಚರ್ಚಿಸುವ ಮೊದಲು ಈ ಭಿತ್ತಿಚಿತ್ರದಲ್ಲಿರುವ ಚಿತ್ರದ ಸ್ಥೂಲ ಪರಿಚಯದ ಅವಶ್ಯಕತೆ ಇದೆ.

ಚರ್ಚೆಯಲ್ಲಿರುವ ಭಿತ್ತಿಚಿತ್ರಗಳು[1] ಹಂಪಿಯ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯಲ್ಲಿವೆ. ಈ ಭಿತ್ತಿಚಿತ್ರಗಳು ಫ್ರೆಸ್ಕೋ ತಾಂತ್ರಿಕತೆ-ಯಲ್ಲಿ ಚಿತ್ರಿಸಲ್ಪಟ್ಟಿವೆ. ಒಳಮಾಳಿಗೆಯನ್ನು ಹಲವಾರು ಚೌಕಾಕಾರದ ಪಟ್ಟಿಕೆಗಳಿಂದ

1. ಈ ಭಿತ್ತಿಚಿತ್ರಗಳನ್ನು ಕುರಿತು ಮೊದಲು ವಿವರವಾಗಿ ಗಮನಿಸಿದವರು.
   *i)* ಎಸ್. ಪರಮಶಿವನ್ ಸಂ-೧೯೩೬; *The Vijayanagara Paintings; Late Vijayanagara Paintings in Brihadishwara Temple at Tanjore Pp. 87-100 in Vijayanagar Six Centinary Commemoration Vol. Dharwad.*
   *ii)* ಕೊಟ್ರಯ್ಯ ಸಿ.ಟಿ.ಎಂ., (೧೯೫೯); *Vijayanagara Paintings at the Virupaksha Temple. QJMS Vol. XLIX-4, Pp. 228-237.*



ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಛತ್ತಿ ಚಿತ್ರ

ವಿಭಾಗಿಸಿ ಅದರಲ್ಲಿ ಹಲವಾರು ಪ್ರಮುಖ ದೇವಾನುದೇವತೆಯರ ಚಿತ್ರಗಳನ್ನು ಚಿತ್ರಿಸಿದೆ. ಜೊತೆಗೆ ಪೌರಾಣಿಕ ಕಥಾವಸ್ತುವಿಗೆ ಸಂಬಂಧಿಸಿದ ಚಿತ್ರಗಳು ಇವೆ. ಮುಖ್ಯವಾಗಿ ವಿಷ್ಣು, ಲಕ್ಷ್ಮೀ, ಶಿವ, ಪಾರ್ವತೀ, ಬ್ರಹ್ಮ, ಸರಸ್ವತೀ, ಗಿರಿಜಾಕಲ್ಯಾಣ, ಮನ್ಮಥನು ಶಿವನ ತಪಸ್ಸನ್ನು ಭಂಗಗೊಳಿಸುತ್ತಿರುವ ಚಿತ್ರ, ಅಷ್ಟ-ದಿಕ್ಪಾಲಕರು, ತ್ರಿಪುರಾಂತಕ, ಶಿವ, ರತಿ-ಮನ್ಮಥರು, ದಶಾವತಾರದ ಚಿತ್ರಗಳು, ಸೀತಾ ಸ್ವಯಂವರ, ದ್ರೌಪದೀ ಸ್ವಯಂವರ, ಅರ್ಜುನನು ಮತ್ಸ್ಯಯಂತ್ರ ಭೇದಿಸುವ ಚಿತ್ರ, ಗೋಪಿಕಾ ವಸ್ತ್ರಾಪಹರಣ, ರಥಗಳ ಸವಾರಿ ಚಿತ್ರಗಳು, ಹಲವಾರು ನರ್ತನ ಆಕೃತಿ-ಗಳು ಇವೆ. ಇವೆಲ್ಲ ಚಿತ್ರಗಳಿಗೆ ಭಿನ್ನವಾಗಿ - ಯತಿಗಳ ಮೆರವಣಿಗೆಯ ಚಿತ್ರ, ಭಿತ್ತಿಚಿತ್ರದ ಕೊನೆಯ ಸ್ತರದಲ್ಲಿ ಇದೆ. ಭಿತ್ತಿಚಿತ್ರದಲ್ಲಿ ಇದೊಂದೇ ಐತಿಹಾಸಿಕ ವ್ಯಕ್ತಿಯನ್ನು ತೋರಿಸುವ ಚಿತ್ರ. ಆದುದರಿಂದ ಈ ಯತಿಗಳು ಅಂದು ಅತ್ಯಂತ ಪ್ರಮುಖ ಸ್ಥಾನ ಪಡೆದವರಾಗಿದ್ದು, ರಾಜಕೀಯವಾಗಿ, ಧಾರ್ಮಿಕವಾಗಿ ಅವರು ಉನ್ನತ ಸ್ಥಾನದಲ್ಲಿದ್ದರೆಂದು ನಾವು ಊಹಿಸ-ಬಹುದು. ಈ ಚಿತ್ರದಲ್ಲಿ ಯತಿಗಳು ತೆರೆದ ಪಲ್ಲಕ್ಕಿಯಲ್ಲಿ ಕುಳಿತಿದ್ದಾರೆ. ಅವರ ಮುದೆ ಮತ್ತು ಹಿಂದೆ ರಾಜಮರ್ಯಾದೆಯಿಂದ ಕೂಡಿದ ಆನೆ, ಕುದುರೆ, ಒಂಟೆ ಮತ್ತು ಕಾಲಾಳುಗಳು, ರಾಜಾಧಿರಾಜರು ಇತ್ಯಾದಿ ಮೆರವಣಿಗೆಯಲ್ಲಿ ಹೊರಟ ರೀತಿಯಲ್ಲಿ ಇದ್ದಾರೆ. ಈ ಮೆರವಣಿಗೆಯ ಚಿತ್ರದ ಕೊನೆ-



ಯಲ್ಲಿ ಇರುವ ವಿರೂಪಾಕ್ಷ ದೇವಾಲಯದ ಕಡೆಗೆ ಮುಖಮಾಡಿ ಹೊರಟ ಚಿತ್ರಣವಿದೆ.

ಈ ಭಿತ್ತಿಚಿತ್ರವನ್ನು ಅಂದರೆ ಪಲ್ಲಕ್ಕಿಯಲ್ಲಿ ಕುಳಿತಿರುವ ಯತಿಗಳನ್ನು ವಿದ್ಯಾರಣ್ಯ-ರೆಂದು ಗುರುತಿಸಲಾಗಿದೆ.[2] ಈ ಹಿಂದಿನ ಇದೇ ಅಭಿಪ್ರಾಯ ಹಾಗೆಯೇ ಮುಂದುವರೆದು-ಕೊಂಡು ಬಂದಿದೆ. ವಿದ್ಯಾರಣ್ಯ - ಕ್ರಿಯಾಶಕ್ತಿ, ಈಗ - ವ್ಯಾಸರಾಯ ಹೀಗೆ ಸಾಧ್ಯವಿರುವ ಎಲ್ಲ ಗುರುತಿಸುವಿಕೆಯನ್ನು ಮಾಡಬಹುದು. ವಿದ್ಯಾರಣ್ಯರು; ವಿಜಯನಗರದ ಅವರ ಸಂಬಂಧ ಬಹುಶಃ ೧೯೩೦ ರ ದಶಕದ ವಿದ್ವಾಂಸರಿಗೆ - ಈ ಚಿತ್ರವನ್ನು ವಿದ್ಯಾರಣ್ಯರೆಂದು ಗುರುತಿಸಲು ಸ್ಫೂರ್ತಿ ನೀಡಿರಬಹುದು. ಆದರೆ ಕಲಾ ಇತಿಹಾಸದ ಮತ್ತು ಐತಿಹಾಸಿಕ ಚೌಕಟ್ಟಿನಲ್ಲಿ ಈ ಚಿತ್ರಗಳನ್ನು ನೋಡಲು ಯತ್ನಿಸಿದ ಕೆಲ ವಿದ್ವಾಂಸರು ಯಾವುದೇ ಒಮ್ಮತವಿಲ್ಲದ ಚರ್ಚೆಯಲ್ಲಿ ಪರ್ಯಾವಸಾನಗೊಂಡಿದ್ದಾರೆ. ಇವುಗಳ ಕಾಲದ ಬಗ್ಗೆಯೂ ಒಮ್ಮತದ ನಿರ್ಣಯವಿಲ್ಲ. ಕೆಲ ವಿದ್ವಾಂಸರಂತೂ ಇವುಗಳು ೧೮ - ೧೯ನೇ ಶತಮಾನದಲ್ಲಿ[3] ರಚಿಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಈ ಭಿತ್ತಿಚಿತ್ರಗಳ ರಚನಾಕಾಲ, ಅವುಗಳಲ್ಲಿನ ಚಿತ್ರಗಳ ಶೈಲಿ ತಾಂತ್ರಿಕತೆ ಈ ಎಲ್ಲ ಅಂಶಗಳಿಗೆ ಪ್ರಾಮುಖ್ಯತೆ ನೀಡಲೇಬೇಕು ಅಂದಾಗ ಮಾತ್ರ ಪ್ರಸ್ತುತ ಚಿತ್ರಗಳ ಅಧ್ಯಯನದ ಸಾರ ದೊರೆಯುವುದು.

**ಯತಿಗಳ ಚಿತ್ರದ ವಿವರಣೆ :** ಯತಿಗಳ ಚಿತ್ರದ ಸಂಯೋಜನೆಯು ಅಡ್ಡ-ಪಟ್ಟಿಯಂತೆ ಉದ್ದವಾಗಿ ಇರುವ ಅವಕಾಶದಲ್ಲಿ = ಅಂತರ (Space) ಇದೆ. ಚಿತ್ರದ ಕೊನೆಯ ಭಾಗದಲ್ಲಿ ಹಂಪಿಯ ವಿರೂಪಾಕ್ಷದೇವರನ್ನು ಲಿಂಗರೂಪದಲ್ಲಿ ತೋರಿಸಿದೆ. ದೇವಸ್ಥಾನದ ಗೋಪುರವನ್ನು ತೋರಿಸಲಾಗಿದೆ. ಈ ದೇವಾಲಯದೆಡೆಗೆ ಪ್ರಸ್ತುತ ಯತಿಗಳ ಚಿತ್ರ ಮುಖಮಾಡಿ ದೇವಾಲಯದ ಮುಖ್ಯ ಬೀದಿಯಲ್ಲಿ ಹೊರಟಂತೆ ಇದೆ.

2. ಈ ಮೇಲಿನ ವಿದ್ವಾಂಸರು ಮೊದಲು ಇದನ್ನು ವಿದ್ಯಾರಣ್ಯಸ್ವಾಮಿ ಎಂದು ಗುರುತಿಸಿದರು. ಅನಂತರ ಶಿವರಾಮಮೂರ್ತಿ ಅವರು ಕೂಡಾ ಅದನ್ನೇ ಪುನರುಚ್ಚರಿಸಿದ್ದಾರೆ. ಸಿ. ಶಿವರಾಮಮೂರ್ತಿ, (೧೯೬೮), *South Indian Painting National Museum, New Delhi.*

3. ದೆಲ್ಲಾಪಿಕೊಲ್ಲಾ ಎ.ಎಲ್. (೧೯೯೭) *Ceiling Paintings in the Virupaksha Temple, Hampi, South Asian Studies Vol. 13 Pp. 35-65.* ಇದರಲ್ಲಿ ಅವರು ಈ ಚಿತ್ರಗಳು, ಅದರಲ್ಲಿ ವಿಶೇಷವಾಗಿ ಯತಿಗಳ ಚಿತ್ರ - ನಂತರದಲ್ಲಿ ರಚಿಸಿದ್ದು ಎಂದಿದ್ದಾರೆ. ಯತಿಗಳಿಗೆ ಜಡೆ ಇದೆ ಎಂದೂ ಬರೆದಿದ್ದಾರೆ. ಚುಕ್ಕೆ ಚುಕ್ಕೆ ಇರುವ ಯೋಧರ ಉಡುಪು ಟಿಪ್ಪುಸುಲ್ತಾನನ ಕಾಲದ್ದು ಎಂದು ಹೇಳುತ್ತಾರೆ. ಈ ಯಾವುದನ್ನೂ ಒಪ್ಪಲು ಸಾಧ್ಯವಿಲ್ಲ. ಯತಿಗಳು ತಲೆಯ ಮೇಲೆ ವಸ್ತ್ರವನ್ನು ಹೊಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಂದಮೇಲೆ ಶ್ರೀಮತಿ ದೆಲ್ಲಾಪಿಕೊಲ್ಲಾ ಅವರು ಪ್ರಸ್ತುತ ಚಿತ್ರವನ್ನು ಹೇಗೆ ನೋಡಿದ್ದಾರೆಂಬ ಸಂಶಯ ಬಂದೇ ಬರುತ್ತದೆ.

ಯತಿಗಳು ತೆರದ ಪಲ್ಲಕ್ಕಿಯಲ್ಲಿ ಕುಳಿತಿದ್ದಾರೆ. ತಲೆಯ ಮೇಲೆ ಹೊದೆದ ಕೆಂಪು ವಸ್ತ್ರ, ಕೈಯಲ್ಲಿ ಓಲೆಗರಿಯಂತಹ ವಸ್ತು ಇದ್ದು ಇನ್ನೊಂದು ಕೈ ಚಿನ್ಮುದ್ರೆಯಲ್ಲಿದೆ. ಸಂಯೋಜನೆಯ ತೀರ ಮುಂದಿನ ಭಾಗದಲ್ಲಿ ಆನೆಯ ಮೇಲೆ ಕುಳಿತ ಸವಾರನು ಅದರ ಹಿಂದೆ ಭರ್ಜಿ ಹಿಡಿದ ಯೋಧರು ರಾಜಪ್ರತೀಕದಂತಿರುವ ಕವಚಸಹಿತ ದಂಡಗಳು ಮತ್ತು ದಂಡಧಾರಿಗಳು ಇದ್ದಾರೆ. ಪಲ್ಲಕ್ಕಿಯ ಹಿಂದೆ ಆನೆ, ಒಂಟೆಯ ಮೇಲೆ ನಗಾರಿ ಇವೆ. ಅವರ ಎರಡೂ ಬದಿಯಲ್ಲಿ ಜೊತೆ ಜೊತೆಯಾಗಿ ಚಿತ್ರಿಸಿರುವ ವಾದ್ಯಕಾರರು, ಚಾಮರಧಾರಿಗಳು, ಖಾಸಗಿ ಪರಿಚಾರಕರುಗಳು ಆಕೃತಿಗಳಿವೆ. ಆ ಕಾಲದ ಉಡುಗೆ-ತೊಡುಗೆಗಳಿಂದ ಅಲಂಕೃತರಾದ ಯೋಧರು, ಮೇಲೆ ಚುಕ್ಕೆಗಳ ವಿನ್ಯಾಸದ ಅಂಗ ಮತ್ತು ಬಿಗಿಯಾಗಿ ಉಟ್ಟ ಧೋತ್ರಗಳಿವೆ. ಎಲ್ಲಾ ಆಕೃತಿಗಳು ರೇಖಾಪ್ರಧಾನವಾದ ಆಕೃತಿಗಳು. ಚಿತ್ರದ ಸಂಯೋಜನೆಯಲ್ಲಿ ಕಲಾವಿದ ವಿಭಿನ್ನ ಕಣ್ಣೋಟಗಳಿಂದ (Perspective) ನೋಡಿದಾಗಿನ ಅನುಭವ ಕೊಡುವ ರೀತಿಯಲ್ಲಿ ಆಕೃತಿಗಳ ಮಧ್ಯೆ ನೈಜವಾದ ಆಂತರಿಕ ಸಂಬಂಧ ಕಲ್ಪಿಸಿದ್ದಾನೆ. ಇದರಿಂದ ಅವನು ನುರಿತ ಕಲಾವಿದನೇ ಆಗಿರಬಹುದೆಂದು ನಾವು ತರ್ಕಿಸಬಹುದಾಗಿದೆ.

**ಚರ್ಚೆ :** ಯತಿಗಳ ಚಿತ್ರವನ್ನು ನಾವು ವಿದ್ಯಾರಣ್ಯರಲ್ಲ, ವ್ಯಾಸರಾಯರದೆಂದು ಗುರುತಿಸಬಹುದಾಗಿದೆ. ಇದಕ್ಕೆ ಶಾಸನೋಕ್ತ ಆಧಾರದ ಅನುಪಸ್ಥಿತಿಯಲ್ಲಿ ಇಂದು ಇವರನ್ನೇ ತೋರಿಸುತ್ತದೆ ಎಂದು ಹೇಳಲು ಅಸಾಧ್ಯವಾದರೂ ದೊರೆವ ಸಮಕಾಲೀನ ದಾಖಲೆಗಳನ್ನು ಗಮನಿಸಿದಾಗ **ಇದನ್ನು ವ್ಯಾಸರಾಯರದೆಂದು ಹೇಳಬಹುದಾಗಿದೆ. ಇದನ್ನು ವಿದ್ಯಾರಣ್ಯ ಅಥವಾ ಕ್ರಿಯಾಶಕ್ತಿಯೆಂದು ಹೇಳಲು ಸಾಕಷ್ಟು ಆಧಾರಗಳು ಇಲ್ಲವೇ ಇಲ್ಲ.** ಆದರೆ ಈ ಕೆಳಗಿನ ಕೆಲ ದಾಖಲೆಗಳು ಇದನ್ನು ವ್ಯಾಸರಾಯರದೆಂದು ರುಜುವಾತುಪಡಿಸುತ್ತವೆ.

೧. ಪ್ರಸ್ತುತ ಭಿತ್ತಿಚಿತ್ರಗಳಿರುವುದು ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಭಿತ್ತಿಯಲ್ಲಿ.

೨. ಮಹಾರಂಗಮಂಟಪದ ನಿರ್ಮಾಣವಾದದ್ದು ಶ್ರೀಕೃಷ್ಣದೇವರಾಯನ ಕಾಲದಲ್ಲಿ[4], ವರ್ಷ ೧೪೩೦ ರ ಶುಕ್ಲಪಕ್ಷ, ಮಾಘ ಶುದ್ಧ ೧೪ ರಂದು. ಅಂದರೆ, ಕ್ರಿ.ಶ. ೧೫೧೦ ಜನವರಿ ೨೪ ರಂದು ಶ್ರೀಕೃಷ್ಣದೇವರಾಯ ಪಟ್ಟಾಭಿಷಿಕ್ತನಾದ ನೆನಪಿಗೋಸ್ಕರ ಈ ಮಹಾರಂಗಮಂಟಪದ ನಿರ್ಮಾಣ ರಾಯಗೋಪುರದ ನಿರ್ಮಾಣ

4. ರಂಗಮಂಟಪದ ನಿರ್ಮಾಣದ ಕಾಲವನ್ನು ಸೂಚಿಸುವ ಶಾಸನ ನೋಡಿ : ವಿಜಯನಗರ ಇನ್‌ಸ್ಕ್ರಿಪ್ಶನ್ - ಮೈಸೂರು - ೧೯೫. ಸಂ. ೧೦೪, ಸಂ. ಸಿ.ಎಸ್. ಪಾಟೀಲ್. ಅಲ್ಲದೇ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ *VI*, ಸಂ. ೨೮೮.



ಮಾಡಿ ಹಲವಾರು ದಾನಗಳನ್ನು, ದತ್ತಿಗಳನ್ನು ದೇವಸ್ಥಾನಕ್ಕೆ ಮತ್ತು ಶ್ರೀವಿರೂಪಾಕ್ಷ ದೇವರಿಗೆ ನೀಡಿದ ವಿಷಯ ಶಾಸನೋಕ್ತವಾಗಿದೆ.

೩. ಅಂದ ಮೇಲೆ ಪ್ರಸ್ತುತ ಭಿತ್ತಿಚಿತ್ರಗಳು ಕ್ರಿ.ಶ. ೧೫೧೦ ರ ನಂತರವೇ ರಚಿಸಲ್ಪಟ್ಟಿರಬೇಕು. ಇವುಗಳ ಕಾಲವನ್ನು ಕೃಷ್ಣದೇವರಾಯನ ಆಳ್ವಿಕೆಯ ಕಾಲಕ್ಕೆ ನಿರ್ಧರಿಸಬಹುದು.

೪. ವ್ಯಾಸರಾಯರು ಕೃಷ್ಣದೇವರಾಯ ಪಟ್ಟಕ್ಕೆ ಬರುವುದಕ್ಕಿಂತಲೂ ಮೊದಲಿನಿಂದಲೂ ಹಂಪಿಯಲ್ಲಿಯೇ ಇದ್ದು ಧಾರ್ಮಿಕವಾಗಿ ಉನ್ನತ ಸ್ಥಾನ ಹೊಂದಿದ್ದರು.[5] ನಂತರ ಕೃಷ್ಣದೇವರಾಯನ ಕಾಲದಲ್ಲಿ ಅವನ ಧಾರ್ಮಿಕ ಮಾರ್ಗದರ್ಶಿಗಳೂ ಆದರು. ಅಲ್ಲದೆ ಅವರು ರಾಜಗುರುವೂ ಆಗಿದ್ದರು. ವ್ಯಾಸರಾಯರ ಮತ್ತು ಕೃಷ್ಣದೇವರಾಯನ ಸಂಬಂಧ ಕುರಿತು ವಿವರಿಸುವ ಹಲವಾರು ಕೃತಿಗಳಿವೆ. **ಕೃಷ್ಣದೇವರಾಯನ ದಿನಚರಿ** ಹಾಗೂ ಸೋಮನಾಥ ಕವಿ ವಿರಚಿತ **ವ್ಯಾಸಯೋಗಿಚರಿತ** ಇವೇ ಮೊದಲಾದ ಕೃತಿಗಳು ಈ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ.

೫. ಕೃಷ್ಣದೇವರಾಯನಿಗೆ ಒದಗಿದ ಕುಹುಯೋಗವನ್ನು ಪರಿಹರಿಸಿದರೆಂಬುದು ಮಿಥ್ಯವೆನಿಸಿದರೂ ಇದರಲ್ಲಿ ತಥ್ಯಾಂಶವಿಲ್ಲದೆ ಇಲ್ಲ.

೬. ದಾಸಕೂಟದ ಮುಖ್ಯ ಹರಿಕಾರರಾಗಿ ಪುರಂದರದಾಸರು, ಕನಕದಾಸರು ಮತ್ತು ವಾದಿರಾಜರಿಗೆ ಮಾರ್ಗದರ್ಶಿಗಳಾಗಿ ಭಕ್ತಿಪಂಥದಲ್ಲಿ ಕ್ರಾಂತಿಯನ್ನೇ ಮಾಡಿದರು.[6]

೭. ಐತಿಹಾಸಿಕವಾಗಿ ಕೃಷ್ಣದೇವರಾಯನ ಕಾಲದಲ್ಲಿ ಅವನು ವ್ಯಾಸರಾಯರಿಗೆ ನೀಡಿದ ಹಲವಾರು ದಾನಗಳ ಉಲ್ಲೇಖಗಳಿವೆ.[7] ವಿಠ್ಠಲ ದೇವಾಲಯದಲ್ಲಿ ಶ್ರೀಯೋಗವರದನರಸಿಂಹಸ್ವಾಮಿಯನ್ನು ಅಚ್ಯುತರಾಯನ ಕಾಲದಲ್ಲಿ ಪ್ರತಿಷ್ಠಾಪಿಸಿದುದಕ್ಕೆ ಶಾಸನದ ಆಧಾರವಿದೆ. ಇದರಿಂದ ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲೂ ಅವರಿಗೆ ವಿಶೇಷ ಸ್ಥಾನಮಾನಗಳಿದ್ದವು ಎಂದು ಹೇಳಬಹುದು.

5. ಶ್ರೀವ್ಯಾಸರಾಯರು ಸುಮಾರು ಕ್ರಿ.ಶ. ೧೪೬೭ ರಿಂದಲೇ ಹಂಪೆಯಲ್ಲಿ ವಾಸ್ತವ್ಯ ಹೂಡಿದ್ದೂ, ಮಾಧ್ವಮತದ ಬೆಳವಣಿಗೆಗೆ ಶ್ರಮಿಸಿದ್ದಾರೆ. ಕೆ.ಟಿ. ಪಾಂಡುರಂಗಿ ಅವರ ಲೇಖನ ನೋಡಿ : *"Dvaita Saints and Scholars of the Vijayanagara Period"*.

6. ಇದಕ್ಕೆ ಪುರಂದರದಾಸರ ನೂರಾರು ದೇವರನಾಮಗಳೇ ಸಾಕ್ಷಿ.

7. ದಾನಶಾಸನಗಳಿಗಾಗಿ ನೋಡಿ : ಎಫಿಗ್ರಾಫಿಯ ಕರ್ನಾಟಕ, ೫, ಸಂ. ೧೦೫-೧೦೬.

ಈ ಮೇಲಿನ ಕಾರಣಗಳಿಂದ ವ್ಯಾಸರಾಯರು ತುಳು ವಂಶದ ಅರಸರ ರಾಜಗುರು ಆಗಿದ್ದರು, ಉನ್ನತ ಸ್ಥಾನ ಹೊಂದಿದ್ದರು ಎಂದು ಹೇಳಬಹುದು. ಆದುದರಿಂದ ಭಿತ್ತಿಚಿತ್ರಗಳಲ್ಲಿ ಅಂದಿನ ಐತಿಹಾಸಿಕ ವ್ಯಕ್ತಿಯನ್ನೇ ಚಿತ್ರಿಸುತ್ತಾರೆಯೇ ಹೊರತಾಗಿ ವಿದ್ಯಾರಣ್ಯರನ್ನಲ್ಲ. ಹೀಗಾಗಿ ಪ್ರಸ್ತುತ ಯತಿಗಳು ವ್ಯಾಸರಾಯರಾಗದೆ ಬೇರೆಯವರಾಗಲು ಹೇಗೆ ಸಾಧ್ಯ? **ಕೃಷ್ಣದೇವರಾಯನ ಕಾಲದ ಯಾವುದೇ ಶಾಸನಗಳಲ್ಲಿ ವಿದ್ಯಾರಣ್ಯರ ಕುರಿತು ಉಲ್ಲೇಖವಿಲ್ಲ. ಅಲ್ಲದೆ ಈ ಮೊದಲು ವಿಜಯನಗರವನ್ನು ಆಳಿದ ಯಾವುದೇ ಮನೆತನದವರು ವಿದ್ಯಾರಣ್ಯರನ್ನು ಉಲ್ಲೇಖಿಸುವ ಮತ್ತು ಅವರು ಹಂಪೆಯೊಂದಿಗೆ ಹೊಂದಿದ್ದ ಸಂಬಂಧವನ್ನು ಸ್ಪಷ್ಟಪಡಿಸುವ ಶಾಸನಗಳು, ದಾಖಲೆಗಳು ಹಂಪಿಯಲ್ಲಿ ದೊರೆತಿಲ್ಲವೆಂದರೆ ಆಶ್ಚರ್ಯವೇ ಸರಿ.** ಪ್ರಾಯಶಃ ವಿದ್ಯಾರಣ್ಯರ ಪ್ರಾಮುಖ್ಯತೆ ಆಗ ಕಡಿಮೆ ಆಗಿದ್ದಿರಬಹುದೇ ಎಂಬ ಸಂಶಯ ಬಾರದೇ ಇರದು. ಈ ಲೇಖನದಲ್ಲಿ ವಿದ್ಯಾರಣ್ಯರು - ಹಂಪಿಯ ಸಂಬಂಧವನ್ನು ಕುರಿತು ವಿವರಿಸುತ್ತಿಲ್ಲ ಅಥವಾ ಪ್ರಶ್ನಿಸುತ್ತಿಲ್ಲ. ಈ ಚರ್ಚೆಯ ಮುಖ್ಯ ಉದ್ದೇಶ, ಆ ಕಾಲದ ಐತಿಹಾಸಿಕ ವ್ಯಕ್ತಿಯೋರ್ವನನ್ನು ನಿಖರವಾಗಿ ಗುರುತಿಸಲು ಪ್ರಯತ್ನಿಸುವುದು. ಈ ಹಿಂದಿನ ವಿದ್ವಾಂಸರು ವಿದ್ಯಾರಣ್ಯರೆಂದು ಗುರುತಿಸುವುದು **ಕೇವಲ ಊಹೆಯಿಂದಲೇ ಎಂಬುದನ್ನು ಇಲ್ಲಿ ಗಮನಿಸಬಹುದು. ಈ ಗುರುತಿಸುವಿಕೆಗೆ ಯಾವುದೇ ತರಹದ ಸ್ಪಷ್ಟ ನಿಲುವು ಇಲ್ಲ ಅಥವಾ ಪುರಾವೆಗಳಿಲ್ಲ.**

ಇವೆಲ್ಲಕ್ಕಿಂತ ಮುಖ್ಯವಾಗಿ ಈ ಮೇಲಿನ ಆಧಾರದಿಂದ ನಾವು ಗಮನಿಸಿದರೆ, ಕೃಷ್ಣದೇವರಾಯ ತನ್ನ ಕಾಲದ ತನ್ನ ರಾಜಗುರುವೂ, ಪೂಜ್ಯರೂ ಆದ, ವ್ಯಾಸತೀರ್ಥರನ್ನು ಮೆರವಣಿಗೆಯ ಚಿತ್ರದಲ್ಲಿ ಚಿತ್ರಿಸಲು ಆದೇಶಿಸಿರುತ್ತಾನೆಯೇ ಹೊರತು ನೇಪಥ್ಯಕ್ಕೆ ಸೇರಿದ ವಿದ್ಯಾರಣ್ಯರನ್ನಲ್ಲ. ಹಂಪಿಯ ವ್ಯಾಸರಾಯರು, ಹರಿದಾಸಸಾಹಿತ್ಯ ಹಾಗೂ ಮಾಧ್ವಪರಂಪರೆಯ ಹಲವು ಯತಿಗಳಿಗೂ ಮೊದಲಿನಿಂದಲೂ ಗಾಢವಾದ ಸಂಬಂಧವಿದೆ. ಹಲವಾರು ಯತಿಗಳು ಸನ್ಯಾಸ ದೀಕ್ಷೆ ಪಡೆದರೂ ತುಂಗಭದ್ರೆಯ ದಡದಲ್ಲಿ ಹಲವರು ಸಮಾಧಿಸ್ತರಾದದ್ದು - ಪಕ್ಕದ ಆನೆಗೊಂದಿಯ ಹತ್ತಿರದ ತುಂಗಭದ್ರೆಯ ನಡುಗಡ್ಡೆ ನವಬೃಂದಾವನದಲ್ಲಿ ವ್ಯಾಸರಾಯರ ಬೃಂದಾವನವೂ ಇವುಗಳಲ್ಲಿ ಒಂದು ಅಂದಮೇಲೆ ಚಿತ್ರಗಳಲ್ಲಿನ ಯತಿಗಳು ವ್ಯಾಸರಾಯರೆಂದು ಹೇಳುವುದು ಸೂಕ್ತ ಮತ್ತು ಯೋಗ್ಯವೂ ಹೌದು. ಹಂಪಿಗೂ ವ್ಯಾಸರಾಯರಿಗೂ ಇರುವ ಸಂಬಂಧವನ್ನು ನಂತರದ ಕಾಲದ ಹಲವಾರು ಚಿತ್ರಗಳಲ್ಲಿ ನೋಡಬಹುದು.



೧೮೩೬[8]ರ ಸುಮಾರಿಗೆ ಚಿತ್ರಿತವಾದ ಹಂಪಿ ಮತ್ತು ವ್ಯಾಸರಾಯರನ್ನು ತೋರಿಸುವ ಭಿತ್ತಿಚಿತ್ರದ ದೃಶ್ಯಪುರಾವೆಯೊಂದು ಮೈಸೂರಿನ ಕೃಷ್ಣಾಂಬ ಅಗ್ರಹಾರದಲ್ಲಿನ ಶ್ರೀಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿಯ ದೇವಾಲಯದ ಚಿತ್ರಮಂಟಪದಲ್ಲಿದೆ.[9] ಇಲ್ಲಿ ಕಲಾವಿದ ಹಂಪಿಯನ್ನು ಹಲವಾರು ದೇವಾಲಯಗಳ ಗೋಪುರಗಳಿಂದ, ವಿರೂಪಾಕ್ಷ ದೇವಾಲಯ, ದೇವಾಲಯದಲ್ಲಿ ಲಿಂಗರೂಪಿ ವಿರೂಪಾಕ್ಷದೇವರು ಮತ್ತು ಪಂಪಾಂಬಿಕೆಯನ್ನು **ಹಂಪೆ ವಿರೂಪಾಕ್ಷ** ಎಂಬ ಶಿರೋನಾಮೆಯಿಂದ ಗುರುತಿಸಿದ್ದಾನೆ. ಅದರಂತೆಯೇ ವ್ಯಾಸರಾಯರು ಪಾಠ ಹೇಳಿಕೊಡುತ್ತಿರುವ ಸನ್ನಿವೇಶವನ್ನು 'ವ್ಯಾಸರಾಯರ ಪಾಠ' ಎಂಬುದಾಗಿ ಉಲ್ಲೇಖಿಸಿದ್ದಾನೆ. ಇದು ಬಿಟ್ಟು ಹಂಪಿ ಮತ್ತು ವ್ಯಾಸರಾಯರ ಸಂಬಂಧವನ್ನು ತೋರಿಸುವ ಉದಾಹರಣೆ ಬೇರೊಂದಿಲ್ಲ. ಆದುದರಿಂದ ಈ ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಅದು ವ್ಯಾಸರಾಯರ ಚಿತ್ರವೆನಿಸದೇ ಇರದು.

ವ್ಯಾಸರಾಯರು ಇದರ ಅಂದಿನ ಸಂದರ್ಭವನ್ನು ನೋಡಿದರೆ ಭಿತ್ತಿಚಿತ್ರ ಕಲಾವಿದ, ರಾಜನಿಗೆ ಪ್ರಿಯರೂ, ರಾಜಗುರುಗಳೂ ಆದ ವ್ಯಾಸತೀರ್ಥರನ್ನೇ ಮೆರವಣಿಗೆಯಲ್ಲಿ ದೃಶ್ಯರೂಪದಲ್ಲಿ ಚಿತ್ರಿಸಿರಬಹುದು. ಅಷ್ಟು ಮುಖ್ಯ ಭಿತ್ತಿಯಲ್ಲಿ ದೇವತೆಗಳ ಸಾಲಿನಲ್ಲಿ ಯತಿಯೋರ್ವರ ಚಿತ್ರ ರಚಿಸಬೇಕಾದರೆ ಅದೊಂದು ಐತಿಹಾಸಿಕ ದಾಖಲೆಯಾಗುತ್ತದೆ. ಶ್ರೀಕೃಷ್ಣದೇವರಾಯ ವ್ಯಾಸರಾಯರನ್ನು ಅದೇ ದೃಷ್ಟಿಯಿಂದ ನೋಡುತ್ತಿದ್ದರಿಂದ, ಅವರದೇ ಚಿತ್ರ ರಚಿಸಲು ಬಯಸಿದ್ದಿರಬಹುದೆಂದು ಹೇಳಬಹುದು ಮತ್ತು ಪ್ರಸ್ತುತ ಚಿತ್ರ ವಿದ್ಯಾರಣ್ಯರದಲ್ಲ, ವ್ಯಾಸರಾಯರದು ಎಂದು ಹೇಳಬಹುದು.

**ಅನುಬಂಧ** : ಈ ಮೇಲಿನ ಲೇಖನ ೨೦೦೧ ರಲ್ಲಿ ಪ್ರಕಟವಾಗಿದೆ. ನಂತರದಲ್ಲಿಯೂ ನಾವು ಶ್ರೀವ್ಯಾಸರಾಯರ ಕುರಿತಾದಂತೆ ಹಾಗೂ ಅವರ ಮತ್ತು ವಿಜಯನಗರದೊಂದಿಗೆ ಅವರ ಸಂಬಂಧಗಳ ಕುರಿತಂತೆ ಸುದೀರ್ಘ ಅಧ್ಯಯನ ನಡೆಸಿದ್ದೇವೆ. ಶ್ರೀಕೃಷ್ಣದೇವರಾಯನ ಕಾಲದಲ್ಲಿ ಅವರಿಗೆ ದೇವತಾಸ್ವರೂಪವಾದ ರಾಜಮರ್ಯಾದೆ ಇದ್ದಿತು. ಅಚ್ಯುತರಾಯನ ಕಾಲದಲ್ಲಿ ಅದು ಮುಂದುವರೆದುಕೊಂಡು ಹೋಯಿತು. 'ವ್ಯಾಸಯೋಗಿಚರಿತ' ಅವರ ಕುರಿತಾಗಿ ಬೆಳಕು ಚೆಲ್ಲುತ್ತದೆ. ಶ್ರೀವ್ಯಾಸರಾಯರು ೧೫೩೯ ರಲ್ಲಿ ಬೃಂದಾವನಸ್ಥರಾದ ಮೇಲೆ ಅವರ ಬೃಂದಾವನವನ್ನು ಶ್ರೀಮದಾ-

8. ಶ್ರೀಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ ಮುಮ್ಮುಡಿಯವರ ದಾನದಿಂದ ನಿರ್ಮಿಸಲಾಗಿದೆ. ಇದಕ್ಕೆ ಸಾಕ್ಷಿಯಾಗಿ ಶಾಸನಗಳಿವೆ ನೋಡಿ : ಎಫಿಗ್ರಾಫಿಯಾ ಕರ್ನಾಟಕ, ಸಂ. ೫, ಶಾಸನ ಸಂಖ್ಯೆ ೪, ಪು. ೧೪೭.

9. ಅದೇ.

ಚಾರ್ಯರ ನೇರಶಿಷ್ಯರಾಗಿದ್ದ ಶ್ರೀಪದ್ಮನಾಭತೀರ್ಥರ ಬೃಂದಾವನದ ಪಕ್ಕದಲ್ಲಿ ಮಾಡಲಾಯಿತು (ನವಬೃಂದಾವನ). ಶ್ರೀವ್ಯಾಸರಾಯರ ಬೃಂದಾವನದ ಮೇಲೆ ವಿಷ್ಣುವಿನ ಹಲವು ರೂಪಗಳನ್ನು ಶಿಲ್ಪಗಳಲ್ಲಿ ರಚಿಸಲಾಗಿದೆ. ಮುಂಭಾಗದಲ್ಲಿ ಕುಳಿತ ಭಂಗಿಯಲ್ಲಿನ ರಾಮ, ಸೀತಾ, ಲಕ್ಷ್ಮಣ, ಹನುಮಂತ ಮತ್ತು ಇವರ ಪಕ್ಕದಲ್ಲಿ ನಿಂತಿರುವ ವ್ಯಾಸಯತಿಗಳು, ಎಡಭಾಗದ ಮುಖದಲ್ಲಿ ನರಸಿಂಹದೇವರು ಮತ್ತು ವ್ಯಾಸಯತಿಗಳು, ಹಿಂಭಾಗದಲ್ಲಿ ವಿಠ್ಠಲದೇವರು ಮತ್ತು ಅಸ್ಪಷ್ಟವಾಗಿರುವ ವ್ಯಾಸ-ರಾಯರು ಹಾಗೂ ಬಲಭಾಗದಲ್ಲಿ ಬಾಲಕೃಷ್ಣ, ಯಶೋದೆ ಮತ್ತು ಕೃಷ್ಣನ ಮುಂಭಾಗ-ದಲ್ಲಿ ವ್ಯಾಸರಾಯರು ಹೀಗೆ ಅವರ ಬೃಂದಾವನದ ನಾಲ್ಕೂ ಮುಖಗಳಲ್ಲಿ ಶ್ರೀಗಳನ್ನು ಬಿಂಬಿಸಲಾಗಿದೆ. ಈ ಶಿಲ್ಪಗಳನ್ನು ಅವರು ಬೃಂದಾವನಸ್ಥರಾದ ವರ್ಷವೇ ರಚಿಸಿರುವ ಸಾಧ್ಯತೆ ಇದೆ. ಹೀಗಾಗಿ ಇವುಗಳು ಶ್ರೀಯತಿಗಳನ್ನು ತೋರಿಸುವ ಸ್ಪಷ್ಟ, ಐತಿಹಾಸಿಕ ನಿದರ್ಶನಗಳಾಗಿವೆ. ಹೀಗಾಗಿ, ಶ್ರೀವಿರೂಪಾಕ್ಷದೇವರ ಮಹಾರಂಗಮಂಟಪದ ಒಳಮಾಳಿಗೆಯ ಭಿತ್ತಿಚಿತ್ರಗಳಲ್ಲಿರುವ ಯತಿಗಳ ಚಿತ್ರವನ್ನು ಈ ಆಧಾರದ ಮೇಲೆಯೂ **ಶ್ರೀವ್ಯಾಸರಾಯರದೇ ಎಂದು ಹೇಳಲು ಸಾಧ್ಯವಾಗುತ್ತದೆಯೇ ವಿನಹ ಬೇರೆ ಯಾವ ಯತಿಗಳ (ವಿದ್ಯಾರಣ್ಯ ; ಕ್ರಿಯಾಶಕ್ತಿ) ಚಿತ್ರಗಳಾಗಲು ಸಾಧ್ಯವಿಲ್ಲ.**

❑ ❑

## ಡಾ. ಆರ್.ಹೆಚ್. ಕುಲಕರ್ಣಿಯವರ ಲೇಖನಕ್ಕೆ ಪೂರಕವಾಗಿ –

ಹಂಪೆಯ ಈ ವರ್ಣಚಿತ್ರದಲ್ಲಿಯೇ ಆ ಯತಿಗಳು ವ್ಯಾಸರಾಯರೆಂದೇ ಬೆರಳು ಮಾಡಿ ತೋರಿಸುವ ಆಂತರಿಕ ಸಾಕ್ಷ್ಯಗಳಿವೆ.

ರಾಜಧಾನಿಯಲ್ಲಿ ವ್ಯಾಸರಾಯರು ಕೃಷ್ಣರಾಯನ ಆಧ್ಯಾತ್ಮಗುರುಗಳಾಗಿದ್ದ-ರಿಂದಲೂ ಮತ್ತು ಸ್ವಂತ ವರ್ಚಸ್ಸಿನಿಂದಲೂ ಅತೀ ಪ್ರಭಾವಶಾಲಿಯಾದ ವ್ಯಕ್ತಿ-ಗಳಾಗಿದ್ದರು. ಹಾಗಾಗಿ ಅನ್ಯದೇಶೀಯ ಮತ್ತು ವಿದೇಶೀಯ ರಾಯಭಾರಿಗಳು ವಿಜಯ-ನಗರದಲ್ಲಿ ಚಕ್ರವರ್ತಿಯ ಭೇಟಿಯೊಂದಿಗೆ ವ್ಯಾಸರಾಯರನ್ನು ಕಂಡು ಗೌರವಾರ್ಪಣೆ ಮಾಡುವುದು ಸಾಮಾನ್ಯವಾಗಿದ್ದಿತು. ಅಷ್ಟೇ ಅಲ್ಲದೆ, ವ್ಯಾಸರಾಯರಿಗೆ ವಿದೇಶೀಯರ ಸಂಪರ್ಕವೂ ಸಾಮಾನ್ಯವಾಗಿ ಇತ್ತೆಂಬುದಕ್ಕೆ ಸಮಕಾಲೀನ ಗ್ರಂಥ 'ವ್ಯಾಸಯೋಗಿಚರಿತಮ್' ಆಧಾರಗಳನ್ನೊದಗಿಸುತ್ತದೆ. ಉದಾ :

> **"....ದ್ವೀಪಾಂತರಭೂಪಾಲಸಂಪ್ರೇಷಿತಪ್ರಧಾನಪುರುಷೈರಸಕೃತ್ ಸಮರ್ಪ್ಯ-ಮಾಣಾನಿ ಬಹುವಿಧೋಪಹಾರಪೂಜನಾನಿ ಚ....."**

(ಶ್ರೀರಾ.ಸ್ವಾ. ಮಠದ ಪ್ರಕಟಣೆ 'ಶ್ರೀವ್ಯಾಸಯೋಗಿಚರಿತಮ್' – ಮುನ್ನುಡಿ – ಪು. LXVI)



ಈ 'ದ್ವೀಪಾಂತರಿ'ಗಳು ಪೋರ್ಚುಗೀಸರೆಂದೂ, ಸಿಂಹಳೀಯರೆಂದೂ ವಿದ್ವಾಂಸರು ಅರ್ಥೈಸಿದ್ದಾರೆ. ಮುಸಲ್ಮಾನ ರಾಯಭಾರಿಗಳೂ ವ್ಯಾಸರಾಯರ ಸಖ್ಯವನ್ನು ಅನುಭವಿಸು-ತ್ತಿದ್ದುದನ್ನು 'ವ್ಯಾಸಯೋಗಿಚರಿತಮ್' ದಾಖಲಿಸುತ್ತದೆ. ಚಕ್ರವರ್ತಿ ಶ್ರೀಕೃಷ್ಣದೇವರಾಯನು ವ್ಯಾಸರಾಯರಿಗೆ ರತ್ನಾಭಿಷೇಕವನ್ನು ಮಾಡಿದ ನಂತರ ವ್ಯಾಸತೀರ್ಥರು ಆ ರತ್ನ-ಗಳನ್ನು ಬೊಗಸೆ ಬೊಗಸೆಯಾಗಿ ಆ ಸಮಾರಂಭಕ್ಕಾಗಮಿಸಿದ ಸಾಮಂತರು ಮತ್ತು ಪ್ರಮುಖ ವ್ಯಕ್ತಿಗಳಲ್ಲಿ ಹಂಚಿದರೆಂದೂ ಅದನ್ನು ಸ್ವೀಕರಿಸಿದವರಲ್ಲಿ ಪುರುಷರೂ ಪಾರಸೀಕರೂ ಇದ್ದರೆಂದೂ 'ವ್ಯಾಸಯೋಗಿಚರಿತಮ್' ಹೇಳುತ್ತದೆ (ಪು. ೭೪).

ವ್ಯಾಸರಾಯಮಠದ ಪರಂಪರಾಗತ ನಂಬಿಕೆಗಳಲ್ಲಿ ಕೃಷ್ಣದೇವರಾಯನ ಕುಹುಯೋಗ ಸಂಬಂಧದ 'ಕರ್ಣಾಟಕ ಸಿಂಹಾಸನ ಗತ ಪ್ರಭೋ' ಎನ್ನುವ ಘಟನೆ-ಯಷ್ಟೇ ಪ್ರಸಿದ್ಧವಾದದ್ದು. ವ್ಯಾಸರಾಯರಿಗೆ ಪಾರಸೀಕ ಸುಲ್ತಾನನದಾ 'ಅಬ್ದುಲ್ಲ'ನು ಸಮರ್ಪಿಸಿದ ಇಸ್ಲಾಮೀ ಗೌರವಸೂಚಕವಾದ ನಗಾರಿ ಹೊತ್ತ ಒಂಟೆ ಮತ್ತು ಹಸಿರು ನಿಶಾನೆ (ಬಾವುಟ) – ಈ ಸಂಗತಿ ಮಠದ ಸಂಪ್ರದಾಯದಲ್ಲಿ ಮತ್ತು ದಾಖಲೆಗಳಲ್ಲಿ ಸ್ಪಷ್ಟವಾಗಿರುವವಲ್ಲದೇ, ಇದೇ ಮಠದ ಪೀಠಾಧಿಪತಿಗಳಾಗಿದ್ದ ವಿದ್ಯಾರತ್ನಾಕರರು ಬರೆದ (೧೯೦೩) ಮಠದ ಇತಿಹಾಸರೂಪದ ಸಂಸ್ಕೃತ ಗ್ರಂಥದಲ್ಲೂ ವ್ಯಾಸರಾಯರು ಮುಸ್ಲಿಂ ದೊರೆಯಿಂದ ಸ್ವೀಕರಿಸಿದ ನಗಾರಿ ಹೊತ್ತ ಒಂಟೆ ಮತ್ತು ಹಸಿರು ನಿಶಾನೆ-ಯನ್ನು ದಾಖಲಿಸುತ್ತದೆ :-

> **"....ಭೇರ್ಯುಷ್ಟ್ರಾದ್ಯಮನನ್ಯಲಭ್ಯಮುರುಣಾಕೃಷ್ಟಾನ್ ಮಹಿಮಾತ್ಮನಃ"**
> **"....ಅಬ್ದೇ ತಾದೃಶೀ ಯವನಾಧಿಪತಿತೋ ಲೇಭೇ ಮಹಾವೈಭವಮ್"**

ಬಿಜಾಪುರದ ಈ ಕಾಲದಲ್ಲಿನ (೧೪೮೯-೧೫೧೦) ಸುಲ್ತಾನನಾದ ಅಲೀ ಅದಿಲ್ ಶಾಹನು ಪರ್ಷಿಯನ್ ಮೂಲ('ಪಾರಸೀಕ')ದವನೆಂದು ಸರ್ವವಿದಿತವಾಗಿದೆ. ಈತನು ಪೋರ್ಚುಗೀಸರನ್ನು ಹದ್ದಿನಲ್ಲಿಡುವ ಉದ್ದೇಶದಿಂದ ಸುಮಾರು ಏಪ್ರಿಲ್ ೧೫೧೦ ನೇ ಇಸವಿಯಲ್ಲಿ ಕೃಷ್ಣದೇವರಾಯನೊಡನೆ ಸ್ನೇಹದ ಒಪ್ಪಂದವನ್ನು ಮಾಡಿ-ಕೊಂಡಿದ್ದುದು ಪೋರ್ಚುಗೀಸ್ ಮೂಲಗಳಿಂದ ದೃಢಪಟ್ಟಿದೆ. ಈ ಒಪ್ಪಂದವಾಗುವ ಸಂದರ್ಭದಲ್ಲಿ ಆದಿಲ್ ಶಾಹನು ತನ್ನ ರಾಯಭಾರಿಗಳ ಮೂಲಕ ನಗಾರಿ ಹೊತ್ತ ಒಂಟೆ ಮತ್ತು ಹಸಿರು ನಿಶಾನೆಯನ್ನು ವ್ಯಾಸರಾಯರಿಗೆ ಸಮರ್ಪಿಸಿರಬೇಕು ಯತಿ-ಗಳು ಇದನ್ನು ಸಂಚಾರಕಾಲದಲ್ಲಿ ಜೊತೆಗೇ ಒಯ್ಯುತ್ತಿದ್ದರಿಂದ ಜನಸಾಮಾನ್ಯರು ಈ ಲಾಂಛನಗಳಿಂದ ವ್ಯಾಸಯತಿಗಳನ್ನು ಗುರುತಿಸುವ ಮಟ್ಟಿಗೆ ಈ ಪಾರಿತೋಷಕಗಳು ಪ್ರಸಿದ್ಧವಾಗಿರಬೇಕು. ಸಾಳುವ ನರಸಿಂಹನು ವ್ಯಾಸಯತೀಶ್ವರರಿಗೆ ಕೊಟ್ಟ ನಗಾರಿ

ಹೊತ್ತ ಆನೆಯ ಮರ್ಯಾದೆಯನ್ನು ಯತಿಗಳು ಶ್ರೀರಂಗಕ್ಷೇತ್ರಕ್ಕೆ ಒಯ್ದುದ್ದನ್ನು 'ವ್ಯಾಸವಿಜಯ' ಉಲ್ಲೇಖಿಸುತ್ತದೆ.

ಪ್ರಸಕ್ತ ವರ್ಣಚಿತ್ರದಲ್ಲಿ ಯತಿಗಳ ಹಿಂದೆ ನಗಾರಿಯನ್ನು ಅದನ್ನು ಬಾರಿಸು-ತ್ತಿರುವ ಮನುಷ್ಯನನ್ನೂ ಹೊತ್ತ ಒಂಟೆಯ ಚಿತ್ರವಿದೆ. ಕರ್ನಾಟ ಸೈನ್ಯದಲ್ಲಿಯೇ ಆಗಲಿ ಅಥವಾ ಧಾರ್ಮಿಕ ಜೀವನ ಮತ್ತು ರಾಜಧಾನಿಯ ನಿತ್ಯಜೀವನದಲ್ಲಿಯೇ ಆಗಲಿ ಒಂಟೆಗಳಿಗೆ ಯಾವ ಪ್ರಮುಖ ಸ್ಥಾನವೂ (ಆನೆ, ಕುದುರೆಗಳಿರುವಂತೆ) ಇರಲಿಲ್ಲ. ಬದಲಿಗೆ ಮುಸ್ಲಿಂ ರಾಷ್ಟ್ರಗಳ ಸೈನ್ಯದಲ್ಲಿಯೂ ನಿತ್ಯಜೀವನದಲ್ಲಿಯೂ ಒಂಟೆಯು ಪ್ರಮುಖ ಪಾತ್ರವಹಿಸಿದ್ದಿತು. ಹೀಗೆ ವ್ಯಾಸರ ವಶದಲ್ಲಿದ್ದ ಒಂಟೆಯು ಮುಸ್ಲಿಂ ದೊರೆ ಕೊಡಮಾಡಿದ್ದೇ ಇರಬೇಕು.

ಒಂಟೆಯ ಮುಂದೆ ಆನೆಯೊಂದಿದ್ದು ಅದರ ಮೇಲೆ ಮಾವುತನನ್ನು ಬಿಟ್ಟು ಹೌದಾ(ಅಂಬಾರಿ)ದಲ್ಲಿ ಯಾರೂ ಕಾಣುತ್ತಿಲ್ಲ. ಖಾಲಿ ಹೌದಾ(ಅಂಬಾರಿ)ದೊಳಗೆ ನಗಾರಿಯಿರುವ ಸಾಧ್ಯತೆಯೂ ಇದೆ.

ಇನ್ನು ಹಸಿರು ಧ್ವಜ ವರ್ಣಚಿತ್ರದ ಬಲಭಾಗದ ಕೊನೆಯಲ್ಲಿ ಛೇದಿಸಿದ ತ್ರಿಕೋಣಾಕಾರದ ಧ್ವಜವಿದೆ. ಹಸಿರು ಬಣ್ಣ ಕಾಣುತ್ತಿಲ್ಲ. ಕಾಲನ ಮಹಿಮೆ. ಈ ಬಗೆಯ ತ್ರಿಕೋಣಾಕಾರದ ಧ್ವಜವು ಮುಸ್ಲಿಂ ಶಾಹಿ ರಾಜ್ಯಗಳದ್ದೆಂದು ಹೇಳಲು ಖಚಿತ ಆಧಾರವಿದೆ. ರೆವರೆಂಡ್ ಹೇರಾಸರು 'ಅರವೀಡು' ಗ್ರಂಥದಲ್ಲಿ ಗೋಲ್ಕೊಂಡಾದ ಸಮಕಾಲೀನ ಅಜ್ಞಾತ ಪರ್ಷಿಯನ್ ಕವಿಯ ಕೃತಿಯ ಏಕೈಕ ಹಸ್ತಪ್ರತಿಯಿಂದ ನಾಲ್ಕು ವರ್ಣಚಿತ್ರಗಳನ್ನು ಪ್ರಕಟಿಸಿದ್ದಾರೆ. ಇವೆಲ್ಲವೂ ರಕ್ಕಸತಂಗಡಿಯ ಯುದ್ಧಕ್ಕೆ ಸಂಬಂಧಪಟ್ಟವು. ಈ ಚಿತ್ರಗಳಲ್ಲಿ ಸ್ಪಷ್ಟವಾಗಿ ವಿಜಯನಗರದ ಧ್ವಜವನ್ನು ಚೌಕ / ಆಯತಾಕಾರವಾಗಿಯೂ, ಮುಸಲ್ಮಾನರ ಧ್ವಜವನ್ನು ಪ್ರಸಕ್ತ ಹಂಪಿಯ ಚಿತ್ರ-ದಲ್ಲಿರುವಂತೆ ಛಿನ್ನ ತ್ರಿಕೋನಾಕಾರದಲ್ಲಿಯೂ ತೋರಿಸಲಾಗಿದೆ. ಹಾಗಾಗಿ ವರ್ಣ-ಚಿತ್ರದಲ್ಲಿರುವ ಧ್ವಜವು ಮುಸ್ಲಿಂ ಮೂಲದ್ದಾಗಿದ್ದು, ಈಗ ಹಸಿರು ಬಣ್ಣ ಮಾಸಿದೆ.

ಹೀಗಾಗಿ ಚಿತ್ರದಲ್ಲಿರುವ ಯತಿಗಳು ತಮ್ಮೊಂದಿಗಿರುವ ಒಂಟೆ ಮತ್ತು ನಿಶಾನೆ-ಗಳನ್ನು ಮುಸ್ಲಿಂ ಮೂಲದಿಂದ ಪಾರಿತೋಷಕವಾಗಿ ಸ್ವೀಕರಿಸಿದ್ದು, ಈ ಬಗೆಯ ಘಟನೆ ವ್ಯಾಸಮುನಿಗಳ ಜೀವನದಲ್ಲಿ ನಡೆದ ಬಗ್ಗೆ ಸಾಕ್ಷ್ಯಾಧಾರಗಳಿದ್ದು, ಕ್ರಿಯಾಶಕ್ತಿ ಯತಿಗಳ ಬಗ್ಗೆಯಾಗಲೀ, ವಿದ್ಯಾರಣ್ಯರ ಬಗ್ಗೆಯಾಗಲೀ **ಈ ರೀತಿ ಸಾಕ್ಷ್ಯಾಧಾರ-ಗಳು ಲಭ್ಯವಿರದೇ ಇರುವುದರಿಂದ ಚಿತ್ರದಲ್ಲಿರುವ ಯತಿಗಳು ವ್ಯಾಸತೀರ್ಥ-ರದೆಂದು ನಿಸ್ಸಂದೇಹವಾಗಿ ಹೇಳಬಹುದು.**

■ **ಡಾ. ಕೆ.ಜಿ. ಗೋಪಾಲಕೃಷ್ಣರಾವ್**




||ಶ್ರೀಹರಿ ಸರ್ವೋತ್ತಮ||    ||ಹರೇ ಶ್ರೀನಿವಾಸ||    ||ವಾಯುಜೀವೋತ್ತಮ||

ನಮೋ ನಮೋ ಕಾರಣಕಾರಣಾಯ। ನಮೋ ನಮಃ ಪಾಲಕಪಾಲಕಾಯ।
ನಮೋ ನಮಃ ಸರ್ವನಿಯಾಮಕಾಯ। ನಮೋ ನಮಃ ಸಾತ್ವಿಕಮುಕ್ತಿದಾಯ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ।

**|| ಸರ್ವೇ ಜನಾಃ ಸುಖಿನೋ ಭವಂತು ||**

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗು-ತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳ-ಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

**ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ**

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ವೇದ ಪುರೋಹಿತರು**

ನಂ. 122, 2ನೇ ಮಹಡಿ, 2ನೇ ಬ್ಲಾಕ್, ಗಣೇಶ ಮಂದಿರ ರಸ್ತೆ
ತ್ಯಾಗರಾಜನಗರ, ಬೆಂಗಳೂರು - 560 028

**ದೂರವಾಣಿ : 080-55351688, ಮೊಬೈಲ್ : 98444 75429**

# ಆಧುನಿಕರ ದೃಷ್ಟಿಯಲ್ಲಿ ಋಗ್ವೇದಕಾಲೀನ ದೇವತೆಗಳು

## ಭಾಗ - ೨ : ಇಂದ್ರ

■ ಡಾ. ಕೊರಟಗೆರೆ ವಾಸುದೇವಾಚಾರ್ಯ

ನಂ. ೧೪, ಶ್ರೀನಿವಾಸ ಕೃಪ, ದೇವನೂರು ರಸ್ತೆ, ತುಮಕೂರು - ೫೭೨ ೧೦೨

ಇಂದ್ರಸೂಕ್ತದಲ್ಲಿನ ೧೫ ಮಂತ್ರಗಳ ಬಗ್ಗೆ ತಿಳಿಯೋಣ :-

**ಮಂತ್ರ ೧ :**

**"ಯೋ ಜಾತವನ................ಜನಾಸ ಇಂದ್ರಃ"**

ಯಾವನು ಹುಟ್ಟಿದ ಕೂಡಲೇ ಬಲದಲ್ಲಿ ಇತರ ದೇವತೆಗಳನ್ನು ಮೀರಿಸಿದನೋ, ಯಾವನು ಪ್ರಥಮ ಪ್ರಾಜ್ಞದೇವತೆಯೋ, ಯಾವನ ಬಲದಿಂದ ದ್ಯಾವಾಪೃಥಿವೀಗಳು ಕಂಪಿಸಿದವೋ ಅವನೇ ಇಂದ್ರನು.

(ಹೋಲಿಸಿ :- ಋಗ್ವೇದದ ರಾತ್ರಿಸೂಕ್ತದಲ್ಲಿ ಗರುಡನ ಉತ್ಪತ್ತಿ :-
**"ಗರುಡಸ್ಯ ಜಾತ ಮಾತ್ರೇಣ ತ್ರಯೋಲೋಕಾಃ ಪ್ರಕಂಪಿತಾಃ......"**)

**ಮಂತ್ರ ೨ :**

**"ಯಃ ಪೃಥಿವೀಂ...................ಜನಾಸ, ಇಂದ್ರಃ"**

ಯಾವನು ಅದುರುತ್ತಿರುವ ಭೂಮಿಯನ್ನು ಸ್ಥಿರಗೊಳಿಸಿದನೋ, ಕ್ಷುಬ್ಧ ಪರ್ವತಗಳನ್ನು ನಿಯಂತ್ರಿಸಿದನೋ, ವಿಸ್ತೃತವಾದ ಅಂತರಿಕ್ಷವನ್ನು ಅಳತೆಗೊಳಿಸಿದನೋ, ಯಾವನು ಸ್ವರ್ಗಕ್ಕೆ ಬೆಂಬಲವಿತ್ತನೋ ಅವನೇ ಇಂದ್ರ.

**ಮಂತ್ರ ೩ :**

**'ಯೋ ಹತ್ವಾಹಿಂ.................ಜನಾಸ ಇಂದ್ರಃ"**

ಇವನು ಸರ್ಪವನ್ನು (ಅಹೀನಾಶಮಾಡಿ ಏಳು ನದಿಗಳನ್ನು ಹೊರಬಿಟ್ಟನು. ವಲನೆಂಬ ರಾಕ್ಷಸನ ವಿವೃತಿಯ ಮೂಲಕ ಗೋವುಗಳನ್ನು ಸೆರೆಯಿಂದ ಬಿಡಿಸಿದನು. ಎರಡು ಬಂಡೆಗಳ ಮಧ್ಯ ಅಗ್ನಿಯನ್ನು ಉತ್ಪತ್ತಿಮಾಡಿದನು - ಇವನೇ ಇಂದ್ರ).



(ವಿಶೇಷ :- ಅಹಿ ಎಂದರೆ ಸರ್ಪ ಅಥವಾ ಸರ್ಪರೂಪದಲ್ಲಿದ್ದ ಅಹಿನಾಮಕ ದೈತ್ಯ. ಅಶ್ಮ ಎಂದರೆ ಕಲ್ಲು. ಆದರೆ ಇಲ್ಲಿ ಸಾಯಣಾಚಾರ್ಯರು ತಮ್ಮ ಭಾಷ್ಯದಲ್ಲಿ 'ಯಶ್ಚ ಅಶ್ಮನೋಃ ಅಶ್ನುತೇ ವ್ಯಾಪ್ನೋತಿ ಅಂತರಿಕ್ಷಂ ಇತಿ ಅಶ್ಮಾ - ಮೇಘಃ' ಎಂದು ಹೇಳಿದ್ದಾರೆ. **ಹೀಗೆ ವಿದ್ಯುತ್ ಉತ್ಪಾದನೆಯ ಕ್ರಮ, ಉಲ್ಲೇಖ - ವೇದಕಾಲದಲ್ಲಿ ಇತ್ತು ಎಂಬುದು ಗಮನಾರ್ಹ**).

**ಮಂತ್ರ ೪ :**

**"ಯೇನೇಮಾ ವಿಶ್ವಾಚ್ಯವನಾ...................ಇಂದ್ರಃ"**

ಇವನು ಎಲ್ಲ ವಸ್ತುಗಳನ್ನು ಅದೃಢಗೊಳಿಸಿದನು. ದಾಸವರ್ಣವನ್ನು (ಮೂಲನಿವಾಸಿ) ಅದೃಶ್ಯವಾಗುವಂತೆ ಮಾಡಿದನು. ಜೂಜುಕೋರನಂತೆ ಶತ್ರುವಿನ ಐಶ್ವರ್ಯವನ್ನು ವಶಪಡಿಸಿಕೊಂಡನು.

**ಮಂತ್ರ ೫ :**

**"ಯಂ ಸ್ಮಾ ಪೃಚ್ಛಂತಿ...................ಜನಾಸ ಇಂದ್ರಃ"**

ಶತ್ರುಸಂಹಾರಕತ್ವಾತ್ ಘೋರನಾದ್ದರಿಂದ 'ಅವನೆಲ್ಲಿ ?' ಎಂದು ಶತ್ರುಗಳು ಪ್ರಶ್ನಿಸಿದರೆ 'ಇವನಲ್ಲ' ಎಂದು ಕೆಲವರು ಹೇಳುತ್ತಾರೆ ಎಂದರೆ ಇಂದ್ರನು ಅಸ್ಪಷ್ಟ ಮೂಲದ ದೇವತೆ ಎಂದು ಪ್ರಾರಂಭದಲ್ಲಿ ಹೇಳಿದೆ.

**ಮಂತ್ರ ೬ :**

**"ಯೋ ರುದ್ರಸ್ಯ...................ಜನಾಸ ಇಂದ್ರಃ"**

ಇವನನ್ನು ಧನಿಕನಾಗಲೀ, ದರಿದ್ರನಾಗಲೀ, ಯಾಚಕನಾಗಲೀ, ಬ್ರಾಹ್ಮಣನಾಗಲೀ ಸ್ತುತಿಮಾಡಿದರೆ ಅವರಿಗೆ ಪ್ರೇರಕನಾಗುತ್ತಾನೆ. ಅವರಿಗೆ ಸಹಾಯಕ. ಸೋಮರಸ ತಯಾರಕರಿಗೆ ಸಹಾಯಕ.

**ಮಂತ್ರ ೭ :**

**"ಯಸ್ಯಾಶ್ವಾಸಃ...................ಜನಾಸ ಇಂದ್ರಃ"**

ಕುದುರೆಗಳು, ಗೋವುಗಳು, ಗ್ರಾಮಗಳು, ಸಮಸ್ತ ರಥಗಳು ಯಾವನ ಅಧೀನವೋ, ಯಾವನು ಉಷಸ್ಸು, ನದಿ ಹಾಗೂ ಸೂರ್ಯರನ್ನು ಸೃಷ್ಟಿಸಿದನೋ, ಯಾವನು ಜಲದ ಶಾಸಕನೋ ಅವನೇ ಇಂದ್ರ.

(ಸಾಯಣಭಾಷ್ಯ :- ಈ ಮಂತ್ರದಲ್ಲಿನ 'ಹಪಾಂ ನೇತಾ' ಎಂಬ ಪದಕ್ಕೆ 'ಮೇಘಭೇದನದ್ವಾರಾ ಅಪಾಂ ನೇತಾ ಪ್ರೇರಕಃ ಸಃ ಇಂದ್ರಃ' ಎಂದು ಸುಂದರ ವ್ಯಾಖ್ಯಾ).

**ಮಂತ್ರ ೮ :**

**"ಯಂ ಕ್ರಂದಸೀ....................ಜಗಾಸ ಇಂದ್ರಃ"**

ಎರಡು ಸೈನ್ಯದಲ್ಲಿನ ಪರಸ್ಪರ ಶತ್ರುಗಳಾದವರು ಸಮೀಪದಲ್ಲಿರಲಿ ಅಥವಾ ದೂರದಲ್ಲಿರಲಿ ಯಾರನ್ನು ಆಹ್ವಾನಿಸುತ್ತಾರೆಯೋ, ಅದೇ ರಥವನ್ನು ಏರಿ ಬೇರೆ ಬೇರೆಯಾಗಿಯೂ ಆಹ್ವಾನಿಸುತ್ತಾರೆಯೋ ಅವನೇ ಇಂದ್ರನು.

(ಇಲ್ಲಿ ಇಬ್ಬರು ಎಂದರೆ ಯೋಧ ಮತ್ತು ಸಾರಥಿ - ಒಂದೇ ರಥವನ್ನು ಏರಿ ಎಂದು 'ಮ್ಯಾಗ್ಡೊನಲ್' ಅಭಿಪ್ರಾಯ).

**ಮಂತ್ರ ೯ :**

**"ಯಸ್ಮಾನ್ನ ಋತೇ....................ಜನಾಸ ಇಂದ್ರಃ"**

ಇಂದ್ರನಿಲ್ಲದೇ ಜನರು ವಿಜಯವನ್ನು ಸಂಪಾದಿಸಲಾರರು. ಹೋರಾಟದಲ್ಲಿ ಆತನನ್ನೇ ಸಹಾಯಕನನ್ನಾಗಿ ಆಹ್ವಾನಿಸುತ್ತಾರೆ. ಆತ ಎಲ್ಲಕ್ಕೂ ಸಮನು. ಅಚಲವಾದದ್ದನ್ನು ಚಲಿಸುವಂತೆ ಮಾಡಬಲ್ಲನು.

(ಸಾಯಣಭಾಷ್ಯ :- ಇಲ್ಲಿ ಅಚ್ಯುತಚ್ಯುತ ಎಂಬ ಮಂತ್ರಭಾಗಕ್ಕೆ 'ಅಚ್ಯುತಾನಾಂ ಕ್ಷಯರಹಿತಾನಾಂ ಪರ್ವತಾದೀನಾಂ ಚ್ಯಾವಯಿತಾ ಇಂದ್ರಃ' ಎಂದಿದೆ.

ಹೋಲಿಸಿ :- ಅರಿಭಿತ್, ನಗಾರಿಃ)

**ಮಂತ್ರ ೧೦ :**

**"ಯಃ ಶಶ್ವತೋ....................ಸಜನಾಸ ಇಂದ್ರಃ"**

ಇಂದ್ರನು ಮಹಾಪಾಪಿಷ್ಠರನ್ನು ಬಾಣದಿಂದ ಕೊಂದನು. ಗರ್ವಿತನಾದವನಿಗೆ ಕ್ಷಮೆಯನ್ನು ಕೊಡುವುದಿಲ್ಲ. ದಸ್ಯುಗಳಿಗೆ ಮಾರಕ.

(ಸಾಯಣಭಾಷ್ಯ :- 'ಇಲ್ಲಿನ 'ಶರ್ವಾ' ಎಂಬ ಮಂತ್ರಗತ ಪದಕ್ಕೆ ಶರ್ವಾಶ್ಯಣಾತಿ ಶತ್ರೂಸ ಅನೇನ ಇತಿ ಶರುರ್ವಜ್ರಃ' ಎಂದು.)



**ಮಂತ್ರ ೧೧ :**

**"ಯಃ ಶಂಬರಂ....................ಸಜನಾಸ ಇಂದ್ರಃ"**

ಪರ್ವತವೊಂದರಲ್ಲಿ ಶಂಬರಾಸುರನು ವಾಸಿಸುತ್ತಿದ್ದ. ಅವನನ್ನು ೪೦ ವರ್ಷಗಳು ಹುಡುಕಿ ನಲವತ್ತನೆಯ ವರ್ಷದಲ್ಲಿ ಅವನನ್ನು ಇಂದ್ರನು ಸಂಹರಿಸಿದನು. ಆ ಶಂಬರನು ಬಲಿಷ್ಠನಾದವನು. ಪುತ್ರ ಅಥವಾ ವೃತ್ರನ ತಾಯಿಯ ಹೆಸರು ದಾನು. ಅವಳ ಮಗನೇ ಸರ್ಪರೂಪೀ ದಾನವ. ಅವನನ್ನು ಇಂದ್ರನು ಕೊಂದಿದ್ದಾನೆ.

(ಶ್ರೀಮದ್ಭಾಗವತ ದಶಮ ಸ್ಕಂಧದಲ್ಲಿ ಶಂಬರಾರಿ - ಕೃಷ್ಣಪುತ್ರ ಪ್ರದ್ಯುಮ್ನ ಎಂದಿದೆ).

**ಮಂತ್ರ ೧೨ :**

**"ಯಃಕಿಸಪ್ತರಶ್ಮಿ....................ಜನಾಸ ಇಂದ್ರಃ"**

ಇಂದ್ರನು ಏಳು ಕಡಿವಾಣವುಳ್ಳ ವೃಷಭನಾಗಿ ಏಳು ನದಿಗಳನ್ನು ಹರಿಯುವಂತೆ ಮಾಡಿದನು. ವಜ್ರಬಾಹುವಾದ ಆತನು ಸ್ವರ್ಗಾಮಿಯಾದ ರೌಹಿಣನನ್ನು ಸಂಹರಿಸಿದನು.

(ಈ ಮಂತ್ರದಲ್ಲಿ ಸಪ್ತರಶ್ಮಿ ಎಂದರೆ ಏಳು ಸಂಖ್ಯೆಯ ಪರ್ಜನ್ಯಗಳು. ಅವು - ೧) ವರಾಹವಃ, ೨) ಸ್ವತಪಸಃ, ೩) ವಿದ್ಯುನ್ಮಹಸಃ, ೪) ಧೂಪಯಃ, ೫) ಶ್ವಾಪಯಃ, ೬) ಗೃಹಮೇಧಾಃ, ೭) ಅಶಮಿ ವಿದ್ವಿಷಃ ಇತಿ. ರೌಹಿಣನಂದರೆ ಇಂದ್ರನಿಂದ ಹತನಾದ ರಾಕ್ಷಸ.)

**ಮಂತ್ರ ೧೩ :**

**"ದ್ಯಾವಾ ಚಿದಸ್ಮೈ....................ಜನಾಸ ಇಂದ್ರಃ"**

ಸ್ವರ್ಗ, ಭೂಲೋಕಗಳು ಅವನಿಗೆ ನಮಸ್ಕರಿಸುತ್ತವೆ. ಅವನ ಭಯಂಕರ ಬಲಕ್ಕೆ ಪರ್ವತಗಳು ಹೆದರುತ್ತವೆ. ಆತನೇ ಸೋಮಪಾ, ವಜ್ರಬಾಹು, ಅವನೇ ಇಂದ್ರ.

**ಮಂತ್ರ ೧೪ :**

**"ಯಃ ಸುನ್ವಂತ....................ಸ ಜನಾಸ ಇಂದ್ರಃ"**

ಹೋಮದಲ್ಲಿ ಸೋಮರಸ ಹಿಂಡುವವನನ್ನು, ಚರುಪುರೋಡಾಶಾದಿಗಳನ್ನು ಪಾಕಮಾಡುವವನನ್ನು, ಸ್ತೋತ್ರಮಾಡುವವನನ್ನು, ಯಜ್ಞಕರ್ಮದಲ್ಲಿ ಸಿದ್ಧತೆ ಮಾಡುವವನನ್ನು ಇಂದ್ರನು ರಕ್ಷಿಸುತ್ತಾನೆ.

ಮಂತ್ರ ೧೫ :

"ಯಃ ಸುನ್ವತೇ....................ವಿದಥರ್ಮಾದೇಮಃ"

''ಇಂದ್ರನನ್ನು ಯಾರೂ ತಡೆಯಲಾರರು. ಯಜ್ಞದಲ್ಲಿ ಭಾಗವಹಿಸಿದವರನ್ನು ಅನುಗ್ರಹಿಸುತ್ತಾನೆ'' - ಹೀಗೆ ವೇದಾಭಿಮಾನಿದೇವತೆಗಳು ಇಂದ್ರನ ಗುಣಗಳನ್ನು ವರ್ಣನೆ ಮಾಡಿ ಹೀಗೆ ಪ್ರಾರ್ಥಿಸುತ್ತಾರೆ :-

ನೀನು ಸತ್ಯಾತ್ಮಕನಾಗಿದ್ದೀಯೆ. ನಾವು ಸದಾ ನಿನಗೆ ಪ್ರಿಯರು, ನಮಗೆ ಒಳ್ಳೆಯ ಪುತ್ರಸಂತಾನ ಕೊಡು. ಇದರಿಂದ ನಾವು ದೇವಪೂಜೆ ಮಾಡೋಣ.

ಹೀಗೆ ಋಗ್ವೇದದಲ್ಲಿ ಇಂದ್ರಸಂಬಂಧೀಸ್ತೋತ್ರ ವಿಶಿಷ್ಟವಾಗಿದೆ.

(ಮುಂದುವರೆಯುವುದು)


**ಶ್ರೀಶ್ರೀಪಾದಂಗಳವರಿಂದ ಅನುಗ್ರಹಿತ ಜನಪ್ರಿಯವಾದ ಯಾತ್ರಾ ಪ್ರವಾಸ**

**ಶ್ರೀವಿಜಯವಿಠ್ಠಲ ಯಾತ್ರಾ ಪ್ರವಾಸ, ಬಳ್ಳಾರಿ**

**(ಕರ್ನಾಟಕ ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಯಿಂದ ಮನ್ನಣೆ ಪಡೆದಿದೆ)**

**19, ಅಂತಾಪುರ ಕಾಲೋನಿ, ಸತ್ಯನಾರಾಯಣಪೇಟೆ, ಬಳ್ಳಾರಿ ಇವರಿಂದ ತಂಪಾದ, ಹಿತಕರವಾದ ಹವೆಯಲ್ಲಿ ಹಿಮಾಲಯ ಸಂದರ್ಶನ**

ವಿಶಿಷ್ಟ ಸುಖೀ ಬಸ್ಸಿನಲ್ಲಿ (ಪುಷ್‌ಬ್ಯಾಕ್ 2 × 2)

ಪ್ರದಕ್ಷಿಣಾಕಾರವಾಗಿ 30 ದಿನಗಳ ಉತ್ತರ ಭಾರತ ಯಾತ್ರಾ ಪ್ರವಾಸ

**ಉತ್ತರ ಭಾರತ ಯಾತ್ರಾ ಪ್ರವಾಸ**

**ತಾ. 04.05.2007 ರಿಂದ ತಾ. 02.06.2007 ರವರೆಗೆ**

ಪಂಢರಾಪುರ, ನಾಸಿಕ್, ಮಾತೃಗಯಾ, ಪುಷ್ಕರ, ಜೈಪುರ, ಗೋಕುಲ, ಮಥುರಾ, ಆಗ್ರಾ, ದೆಹಲಿ, ಶ್ರೀಬದರೀನಾಥ, ಹರಿದ್ವಾರ, ನೈಮಿಷಾರಣ್ಯ, ಅಯೋಧ್ಯ, ಅಲಹಾಬಾದ್, ವಾರಣಾಸಿ, ಗಯಾ, ಪೂರಿಜಗನ್ನಾಥ, ಭುವನೇಶ್ವರ, ಶ್ರೀಕೂರ್ಮ, ಸಿಂಹಾಚಲ, ಅನ್ನಾವರ, ರಾಜಮಹೇಂದ್ರಿ, ವಿಜಯವಾಡ, ಅಹೋಬಲ ಇತ್ಯಾದಿ.

**ಸೀಟು ಒಂದಕ್ಕೆ ರೂ. 16,000/- ಮಾತ್ರ**

**ಇಂದೇ ಸೀಟು ಒಂದಕ್ಕೆ ರೂ. 5,000/- ಮುಂಗಡ ಹಣವನ್ನು ಕೊಟ್ಟು ತಮ್ಮ ಸೀಟನ್ನು ಕಾದಿರಿಸಿರಿ. ಈ ಸುದೀರ್ಘ ಪ್ರವಾಸದಲ್ಲಿ ಪ್ರತಿದಿನ ಎರಡು ಕಾಫಿ, ಊಟ, ರಾತ್ರಿ ಪೂರ್ಣ ಫಲಹಾರ, ದರ್ಶನದ ವ್ಯವಸ್ಥೆ, ವಸತಿ, ಪ್ರಾಂತಗಳ ತೆರಿಗೆ ಹಾಗೂ ಶ್ರೀಬದರೀ ಛಾರ್ಜು ಸೇರಿದೆ.**

**ಪ್ರತಿದಿನ ಯಾತ್ರೆಯಲ್ಲಿ ಮಡಿಯಿಂದ ಸೌದೆಯ ಮೇಲೆ ಅಡಿಗೆ, ದೇವತಾರ್ಚನೆ, ನುರಿತ ವಿದ್ವಾಂಸರಿಂದ ನಿತ್ಯ ಭಾಗವತ ಪ್ರವಚನ, ಪಿಂಡಪ್ರಧಾನ ಹಾಗೂ ಸಂಕಲ್ಪಗಳನ್ನು ಕ್ರಮರೀತಿಯಿಂದ ನಡೆಸುವ ಪುರೋಹಿತರ ವ್ಯವಸ್ಥೆ. ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಕೇವಲ ಬಸ್ಸಿನ ಪ್ರವಾಸದಲ್ಲಿ ಮಾತ್ರ ಸಾಧ್ಯವಾಗುತ್ತದೆ.**

**ಈ ಪ್ರವಾಸವು ಕೇವಲ ಬ್ರಾಹ್ಮಣರಿಗೆ ಮೀಸಲಾದ ಯಾತ್ರಾ ಪ್ರವಾಸ**

ಹೆಚ್ಚಿನ ವಿವರಗಳಿಗೆ

**R.V. Chalapathy**
Proprietor

**Sri Vijaya Vittala Travels**

**H.C. Guruprasad**
S/o. R.V. Chalapathy

"SRI VIJAYA", 19, Anthapur Colony, 2nd Cross, S.N. Pet, Bellary - 583 101

**Ph : 08392-275580 / 271861**






# ಏಕಾದಶೀ ಮಹಾತ್ಮೆ


■ ವಿದ್ವಾನ್. ಬಿ. ಸತ್ಯನಾರಾಯಣಾಚಾರ್ಯ

ನಂ. ೧೩/೩೭ ಸಿ, ೧ನೇ ಮುಖ್ಯರಸ್ತೆ, ಎಸ್.ಬಿ.ಎಂ. ಕಾಲೋನಿ, ಆನಂದನಗರ, ಬೆಂಗಳೂರು - ೨೪


**ಹಿಂದಿನ ಸಂಚಿಕೆಯಿಂದ.......**

ತಿಥಿತ್ರಯಗಳು ಬಂದುವೆಂದರೆ ದ್ವಿಪಕ್ಷಗಳಲ್ಲಿಯೂ ಆ ಮಹಾರಾಜನು ಅರುಣೋದಯದಲ್ಲಿ ತನ್ನ ದೂತರಿಂದ-

**ಅಷ್ಟವರ್ಷಾಧಿಕೋ ಯಸ್ತು ಅಶೀತಿ ನಹಿ ಪೂರ್ಯತೇ ।**
**ಯೋ ಭುಂಕ್ತೇ ಮಾನವೋ ಪಾಪೀ ವಿಷ್ಣೋರಹನಿ ಜಾಗತೇ ॥**
**ಪಿತಾ ವಾ ಯದಿ ವಾ ಪುತ್ರೋ ಭಾರ್ಯಾವಾಪಿ ಸುಹೃಜ್ಜನಃ ।**
**ಪದ್ಮನಾಭದಿನೇ ಭುಂಕ್ತೇ ನಿಗ್ರಾಹ್ಯೋ ದಸ್ಯುವದ್ಭವೇತ್ ॥**

ಎಂದು ಡಂಗೂರವನ್ನು ಸಾರಿಸುತ್ತಿದ್ದನು. ಈ ಡಂಗೂರವು ತ್ರಿಕಾಲಾಬಾಧಿತವಾಗಿ ಸರ್ವರಿಗೂ ಅನ್ವಯಿಸುತ್ತದೆ. ಈ ರುಕ್ಮಾಂಗದ ರಾಜನ ಧರ್ಮದಿಂದ ಅವನ ಸಮಸ್ತ ಪ್ರಜೆಗಳೆಲ್ಲರೂ ಇಹಪರ ಸೌಖ್ಯಗಳನ್ನು ಪಡೆದರು. ರುಕ್ಮಾಂಗದನ ದಾರ್ಢ್ಯವನ್ನೂ, ಕೀರ್ತಿಯನ್ನೂ ಪ್ರಕಟಿಸಲು ಹಾಗೂ ಸಕಲ ಜನರಿಗೆ ಆದರ್ಶವಾಗಲೆಂದೂ ಬ್ರಹ್ಮದೇವನು ಮೋಹಿನಿಯನ್ನು ಸೃಷ್ಟಿಸಿ ರಾಜನ ಬಳಿಗೆ ಕಳುಹಿಸಿದನು. ತಿಥಿತ್ರಯಗಳಲ್ಲಿ ಆಹಾರ, ವಿಹಾರಗಳನ್ನು ಬಯಸಿ ಅವನ ವ್ರತವನ್ನು ಭಂಗಮಾಡಲು ಅವಳನ್ನು ನಿಯೋಜಿಸಲಾಗಿತ್ತು. ಋಜುಪುಂಗವನಾದ ಬ್ರಹ್ಮನು ವ್ರತೋಪದೇಶಕನೇ ಆಗಿ ಅದಕ್ಕೆ ವಿಘ್ನವನ್ನು ಕಲ್ಪಿಸಬಹುದೇ ಎಂದರೆ ರುಕ್ಮಾಂಗದನ ಯೋಗ್ಯತೆಯನ್ನು ತಿಳಿದೇ ಲೋಕಶಿಕ್ಷಣಾರ್ಥವಾಗಿ ಈ ಮೋಜನ್ನು ರೂಪಿಸಿದನು. ಏನೇ ತೊಡರುಗಳು ಪ್ರತಿಜ್ಞೆಗಳು ಎದುರಾದರೂ ಏಕಾದಶಿಯ ನಿಮಿತ್ತ ಅವುಗಳನ್ನು ಉಲ್ಲಂಘಿಸಿದರೆ ಪಾಪವಿಲ್ಲ. ಪುಣ್ಯವೇ ಉಂಟು ಎಂಬುದನ್ನು ಜನರಿಗೆ ಅರುಹಲಿಕ್ಕಾಗಿ ಮಾತ್ರ ಬ್ರಹ್ಮನು ಈ ಲೀಲೆಯನ್ನು ತೋರಿದನು. ಈ ಸಂದರ್ಭದಲ್ಲಿ ಮೋಹಿನಿಯೇ ಪರಾಭವಳಾಗಿ ರುಕ್ಮಾಂಗದನು ಯಶಸ್ವಿಯೂ, ಕೀರ್ತಿವಂತನೂ, ಆದರ್ಶಪ್ರಾಯನೂ ಆಗಿ ಮೆರೆದನು.

ಈ ಸಂದರ್ಭದಲ್ಲಿ ಮೋಹಿನಿಗೆ ಒಂದು ವರವು ಪ್ರಾಪ್ತವಾಯಿತು. ಅದೇನೆಂದರೆ ಯಾರು ದಶಮೀ, ಸಂಧಿಗ್ದೇಕಾದಶಿ, ವಾದಗ್ರಸ್ಥ ಸಂದರ್ಭದಲ್ಲಿ ಹಿಂದಿನ ದಿನವೇ

ಉಪವಾಸ ಮಾಡುವುದು, ಶುದ್ಧ ಏಕಾದಶೀ ದಿನ ತಿನ್ನುವುದು, ದ್ವಾದಶೀ ದಿನ ಮುಹೂರ್ತ ಮೀರಿ ಪಾರಣೆ ಮಾಡುವುದು (ಈ ನಿಯಮವು ಸ್ತ್ರೀಯರಿಗಿಲ್ಲ), ದಶಮೀ, ದ್ವಾದಶೀ ದಿನಗಳಲ್ಲಿ ಎರಡು ಹೊತ್ತು ಭೋಜನ ಮಾಡುವುದು, ಏಕಾದಶಿಯ ದಿನ ಜಾಗರಣೆ ಮಾಡದಿರುವುದು, ಜಾಗರಣೆ ಮಾಡಿದರೂ ದ್ವಾದಶಿಯಂದು ಮಧ್ಯಾಹ್ನ ನಿದ್ರೆ ಮಾಡುವುದು, ಸತಿಸಂಧಿ, ಇತ್ಯಾದಿಗಳನ್ನು ಆಚರಿಸುವವರ ಸಮಸ್ತ ಪುಣ್ಯವು ಈ ಮೋಹಿನಿಗೆ ಪ್ರಾಪ್ತ-ವಾಗಲೆಂದು ಆಕೆಗೆ ವರವಿರುತ್ತದೆ. ಇಂಥವರ ಪುಣ್ಯವು ಆಕೆಗೇ ಮೀಸಲು.

ಏಕಾದಶಿಯ ದಿನದಂದು ಏತಕ್ಕಾಗಿ ಭುಂಜಿಸಬಾರದೆಂದರೆ ಕಲ್ಯಾದಿ ಸಕಲ ಪಾಪಾಭಿಮಾನಿ ದೈತ್ಯರು ಅಂದು ಆಹಾರದಲ್ಲಿ ಆವಿಷ್ಠರಾಗಿರುತ್ತಾರೆ.

**ಪೃಥಿವ್ಯಾಂ ಯಾನಿ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।**
**ಅನ್ನಮಾಶ್ರಿತ್ಯ ತಿಷ್ಠಂತಿ ಸಂಪ್ರಾಪ್ತೇ ಹರಿವಾಸರೇ ॥**

ಎಂಬ ಮಾತಿನಂತೆ ಏಕಾದಶಿಯ ಉಪವಾಸಕ್ಕಿಂತ ಪುಣ್ಯವಿಲ್ಲ, ಭಕ್ಷಣೆಗಿಂತ ಪಾಪವಿಲ್ಲ.

**ವರಂ ಸ್ವಮಾತೃಗಮನಂ ವರಂ ಗೋಮಾಂಸ ಭಕ್ಷಣಮ್ ।**
**ವರಂ ಹತ್ಯಾ ಸುರಾಪಾನಾ ಏಕಾದಶ್ಯಾಂತು ಭೋಜನಾತ್ ॥**

ಎಂದಂತೆ ತಾಯಿಗಂಡತನಕ್ಕಿಂತಲೂ ಏಕಾದಶೀ ಭಕ್ಷಣವು ಹೆಚ್ಚಿನ ಪಾಪಕರ-ವಾದುದು, ಹೇಯವಾದುದು.

**ಯಾವತ್ಪಾಪಾನಿ ದೇಹೇಸ್ಮಿನ್ ತಿಷ್ಠಂತಿ ಮನುಜಾಧಿಪ ।**
**ಯಾವನ್ನೋ ಪೋಷಯಜ್ಜಂತುಃ ಪದ್ಮನಾಭ ದಿನಂ ಶುಭಮ್ ॥**

ಎಂದರೆ ಏಕಾದಶಿಯ ದಿನ ಉಪವಾಸ ಮಾಡುವ ತನಕ ಮಾತ್ರ ಪಾಪಗಳು (ದೈತ್ಯರು) ನಮ್ಮಲ್ಲಿ ನೆಲೆಸಿರುತ್ತಾರೆ, ಹೇಸಿಗೆಯಲ್ಲಿ ನೊಣಗಳಿರುವಂತೆ.

ಏಕಾದಶಿಯ ವ್ರತವನ್ನು ಮಾಡಲು ಸಕಲರೂ ಅಧಿಕಾರಿಗಳೇ. ಪಾಪಿಗಳು ಮಾತ್ರ ಮಾಡುವುದಿಲ್ಲ. ಪಾಪಿಗಳೂ ಮಾಡಿದರೆ ಪಾಪಮುಕ್ತರಾಗುತ್ತಾರೆ.

**ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತಥಾ ।**
**ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ಭರ್ತೃಮತೀ ತಥಾ ॥**
**ಅಭರ್ತೃಕಾ ತಥಾsನ್ಯೇ ಚ ಸೂತವೈದೇಹಿಕಾದಯಃ ।**
**ಏಕಾದಶ್ಯಾಂ ನ ಭುಂಜೀಥಾ ಪಕ್ಷಯೋರುಭಯೋರಪಿ ॥**



ಎಂದರೆ ಸಕಲ ವರ್ಣಾಶ್ರಮ, ಸ್ತ್ರೀ-ಪುರುಷರು, ಅವಿಧವಾ-ವಿಧವಾ, ರಜಸ್ವಲಾ, ಬಡವ, ಬಲ್ಲಿದ, ಗೋಪಾಲ, ಭೂಪಾಲರೆಲ್ಲರೂ ಈ ವ್ರತವನ್ನು ಮಾಡಬೇಕು. ಜನನ-ಮರಣಗಳ ಸೂತಕಗಳೂ ಈ ವ್ರತಕ್ಕೆ ಅಡ್ಡಿಯಿಲ್ಲ. ಇದನ್ನು ಯಾವ ಸಂದರ್ಭದಲ್ಲಿಯೂ ಬಿಡುವಂತಿಲ್ಲ (ಸ್ತ್ರೀಯರಿಗೆ ಪ್ರಸವಾನಂತರ, ಮಾಸತ್ರಯ ವಿನಾ). ಇದು ಗೋಪೀಚಂದನ ಲೇಪನದಂತೆ.

ಇನ್ನು ಏಕಾದಶಿಯ ಜಾಗರಣೆಯ ತರುವಾಯ ಸಮಯಕ್ಕೆ ಸರಿಯಾಗಿ ಸ್ನಾನ, ದೇವರ ಪೂಜಾದಿಗಳನ್ನು ಮಾಡಿ ಅರುಣೋದಯಕ್ಕೆ ನೈವೇದ್ಯ, ವೈಶ್ವದೇವಾದಿ-ಗಳನ್ನು ಮುಗಿಸಿ, ದ್ವಾದಶೀ ತಿಥಿಯು ಮೀರದ ಮುನ್ನ ಪಾರಣೆಯನ್ನು ಮಾಡಬೇಕು. ಸಮಯಕ್ಕೆ ಸರಿಯಾಗಿ ಪಾರಣೆಯನ್ನು ಮಾಡುವುದೇ ದ್ವಾದಶಿಯ ವೈಶಿಷ್ಟ್ಯ. ಏಕಾದಶಿಯ ಉಪವಾಸಕ್ಕಿಂತಲೂ ಗುರುತರವಾದ ಮಹಿಮೆಯು ಸಮಯಕ್ಕೆ ಸರಿಯಾಗಿ ಪಾರಣೆಯನ್ನು ಮಾಡುವುದೇ ಆಗಿದೆ. ಇದು ಶ್ರೀಹರಿ ಪ್ರೀತಿಕರವಾದುದು. ಇದು ಮಹಾನ್ ಕೀರ್ತಿವಂತನಾದ ಅಂಬರೀಷ ಮಹಾರಾಜನಿಂದ ಪ್ರಕಟವಾಗಿದೆ. ದ್ವಾದಶೀ ಮುಹೂರ್ತಕ್ಕೆ ಸರಿಯಾಗಿ ಬಾರದ ದೂರ್ವಾಸರ ಪ್ರಸಂಗದಿಂದ ಜಲಪಾನ ಮಾತ್ರದಿಂದ ಪಾರಣೆ ಮಾಡಿದ್ದರಿಂದ ದೂರ್ವಾಸರ ಆಗ್ರಹದಿಂದಲೂ ರಾಜನು ಪಾರಾದನು. ರುದ್ರಾಂಶಸಂಭೂತರಾದರೂ ದೂರ್ವಾಸರು ಅಂಬರೀಷನ ಯೋಗ್ಯತೆ-ಯನ್ನು ಪ್ರಕಟಿಸಲಿಕ್ಕಾಗಿ ಮಾತ್ರ ಹಾಗೆ ಮಾಡಿದರು. ಅವರು ಪಾರಣೆ ವಿರೋಧಿ-ಗಳಲ್ಲವೇ ಅಲ್ಲ. ದ್ವಾದಶೀ ವ್ರತಕ್ಕೆ ಸಿಕ್ಕುವ ಫಲವೆಂದರೆ –

**ಉಪರಾಗಸಹಸ್ರಾಣಿ ವ್ಯತೀಪಾತಶತಾನಿ ಚ ।**
**ಅಮೂಲಕ್ಷಂತು ದ್ವಾದಶ್ಯಾಃ ಕಲಾಂ ನಾರ್ಹಂತಿ ಶೋಡಶೀಮ್ ॥**

ಎಂದರೆ ಸಾವಿರ ಗ್ರಹಣ ಧರ್ಮಾಚರಣ, ವ್ಯತೀಪಾತ ನೂರು, ಇತ್ಯಾದಿ ಲಕ್ಷೋಪಲಕ್ಷ ಧರ್ಮದಿಂದ ಬರುವ ಫಲಗಳು ದ್ವಾದಶೀ ತಿಥಿಯ ಪಾರಣೆಗೆ ಹದಿನಾರನೇ ಒಂದಂಶಕ್ಕೆ ಸಾಟಿಯಾಗಲಾರವು. ಇತ್ಯಾದಿಯಾಗಿ ಈ ತಿಥಿತ್ರಯಗಳ ವ್ರತದ ಮಹಿಮೆ-ಯನ್ನು ಭಾಗವತ, ಭಾರತ, ವಿಷ್ಣುರಹಸ್ಯ, ಪಂಚರಾತ್ರಾಗಮಾದಿ ಬಹುಗ್ರಂಥಗಳಲ್ಲಿ ವರ್ಣಿಸಲಾಗಿದೆ. ಇದನ್ನು ಸಕಲ ಜ್ಞಾನಿಗಳೂ ಆಚರಿಸಿದ್ದಾರೆ, ಮುಕ್ತರಾಗಿದ್ದಾರೆ. ದ್ವಾದಶೀ- ಯಂದು ಕರ್ಮಸಂಕೋಚವಾದ ದೋಷವಿಲ್ಲ. ಪಾರಣೆ ಮುಹೂರ್ತ ಮಾತ್ರ ಮೀರಬಾರದು. ತೀರ್ಥವನ್ನಾದರೂ ಸ್ವೀಕರಿಸಬೇಕು.

ಇನ್ನು ಕೊನೆಯದಾಗಿ ತಿಥಿತ್ರಯ ವ್ರತವನ್ನು ಆಚರಿಸಲೇಬೇಕೆಂದು ಪ್ರತಿಪಾದಿಸ-ಲಾಯಿತು. ಆದರೆ ರುಕ್ಮಾಂಗದನು ಏಕಾದಶಿಯನ್ನೂ, ಅಂಬರೀಷನು ದ್ವಾದಶೀ-ಯನ್ನು ಆಚರಿಸಿದರೆಂದು ಕಥೆಗಳಲ್ಲಿ ವೈಭವೀಕರಿಸಿರುತ್ತಾರೆ. ಅವರು ಮೂರು

ದಿನಗಳ ವ್ರತವನ್ನು ಮಾಡಿದರೆಂದು ಏಕೆ ಪ್ರಸಿದ್ಧವಿಲ್ಲ? ಎಂದರೆ ಅವರು ಮೂರು ದಿನಗಳ ವ್ರತವನ್ನು ಕಟ್ಟುನಿಟ್ಟಾಗಿಯೇ ಆಚರಿಸಿರುತ್ತಾರೆ. ಹೀಗೆ ಅವರು ಆಚರಿಸುತ್ತಿರುವಾಗ ಅಕಸ್ಮಾತ್ತಾಗಿ ರುಕ್ಮಾಂಗದನಿಗೆ ಏಕಾದಶಿಯಂದು ಅಂಬರೀಷನಿಗೆ ದ್ವಾದಶಿಯಂದು ಮಾತ್ರ ತೊಂದರೆಯು ಬಂದಿತ್ತು. ಆ ತೊಂದರೆಗಳನ್ನು ಅವರು ತಮ್ಮ ದೃಢಭಕ್ತಿಯಿಂದ ನಿವಾರಿಸಿಕೊಂಡರು. ಅದರಂತೆಯೇ ಶ್ರೀಹರಿಯು ನಮಗೆ ತಿಥಿತ್ರಯ ವ್ರತವನ್ನು ಆಚರಿಸುವ ದಾರ್ಢ್ಯವನ್ನೂ, ಮನಸ್ಸನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸೋಣ.

ಒಟ್ಟಿನಲ್ಲಿ ಏಕಾದಶಿಯ ಮಟ್ಟಿಗೆ 'ಆಯಾ ಮಠಗಳ ಸಂಪ್ರದಾಯ' ಎಂಬ ಪ್ರಸಕ್ತಿಯೇ ಉದ್ಭವಿಸುವುದಿಲ್ಲ. ಇದಕ್ಕೆ ಕೈಹಾಕದಂತೆ ಶ್ರೀಮದಾಚಾರ್ಯರು ಅಂದೇ ನಿರ್ಣಯಿಸಿದ್ದಾರೆ. ವಿಭಿನ್ನ ದಿನಗಳಲ್ಲಿ ಏಕಾದಶಿಯನ್ನು ಆಚರಿಸುವಂತೆ ಮಾಡಿದರೆ ಕೆಲವರಿಗೆ ಲೌಕಿಕವಾಗಿ ಲಾಭವಾಗಬಹುದು. ಲಾಭವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಯಾದ ಈ ವಿಭಿನ್ನತೆಯನ್ನು ನಿವಾರಿಸುವುದೆಂದರೆ ಹತ್ತಬಾರದೆಂದೇ ಹರಳೆಣ್ಣೆಯನ್ನು ಗಾಜಿನ ಕಂಬಕ್ಕೆ ಹಚ್ಚಿರುವಾಗ ಅದನ್ನು ಹತ್ತಲು ಯತ್ನಿಸಿದಂತೆ ಆಗುತ್ತದೆ. 'ತನ್ನ ಸಂಪ್ರದಾಯ' 'ಧರ್ಮಶಾಸ್ತ್ರಗಳ ಗತಿ' ಇವುಗಳ ಯಾವ ನೆಪಗಳೂ ಆಚಾರ್ಯರ ನಿರ್ಣಯವನ್ನು ಕದಲಿಸಲಾರವು. ಸ್ವೇಚ್ಛಾಚಾರಕ್ಕೆ ಮದ್ದಿಲ್ಲ.

(ಮುಗಿದುದು)

## ವಿಕಲಾಂಗರಿಗಾಗಿ ವಿಶೇಷವಾಗಿ ನಿರ್ಮಿಸಿದ ಕಟ್ಟಡ ಉದ್ಘಾಟಿಸಿದ ರಾಷ್ಟ್ರಪತಿ

ಮಂತ್ರಾಲಯ ಕ್ಷೇತ್ರಕ್ಕೆ ರಾಯರ ದರ್ಶನಕ್ಕಾಗಿ ಆಗಮಿಸುವ ವಿಕಲಾಂಗರಿಗಾಗಿ ಸಕಲ ಸೌಲಭ್ಯಗಳನ್ನೊಳಗೊಂಡ ಅತಿಥಿಗೃಹವನ್ನು ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು ದಿನಾಂಕ ೦೧-೦೨-೨೦೦೭ ರಂದು ಉದ್ಘಾಟಿಸಿದರು. ಮಠದ ಈ ಪ್ರಯತ್ನ ಶ್ಲಾಘನೀಯ ಎಂದು ರಾಷ್ಟ್ರಾಧ್ಯಕ್ಷರು ನುಡಿದರು. ಈ ಕಟ್ಟಡವನ್ನು ಬೆಂಗಳೂರಿನ ಬಿ.ಎ. ಪಾಟೀಲ್ ರವರ ಸಹಾಯದಿಂದ ನಿರ್ಮಿಸಲಾಗಿದೆ. ಇದರ ಉಪಯೋಗವನ್ನು ದರ್ಶನಾರ್ಥಿಗಳಾಗಿ ಬರುವ ವಿಕಲಾಂಗರಿಗೆ ಉಚಿತವಾಗಿ ನೀಡಲಾಗುವುದು ಎಂದು ಶ್ರೀಮಠದ ಅಧಿಕೃತ ವಕ್ತಾರರು ತಿಳಿಸಿದರು. ನಂತರ ರಾಷ್ಟ್ರಪತಿಗಳು ನೂತನವಾಗಿ ವ್ಯವಸ್ಥೆಗೊಳಿಸಿರುವ ಫೋಟೋ ಗ್ಯಾಲರಿಯನ್ನು ಕುತೂಹಲದಿಂದ ವೀಕ್ಷಿಸಿ ಮೆಚ್ಚುಗೆ ಸೂಚಿಸಿದರು.





# ಲಿಕುಚ ವಂಶದವರಿಂದ ಮಧ್ವೋಕ್ತಿ

ಸಂಗ್ರಹ : **ವಿದ್ವಾನ್ ಎನ್.ಆರ್. ದ್ವಾರಕಾನಾಥಾಚಾರ್ಯ**
ಅಧ್ಯಾಪಕರು, ಎಸ್.ಜಿ.ಎಸ್. ವಿದ್ಯಾಪೀಠ, ಮಂತ್ರಾಲಯ

ಪ್ರತಿಯೊಬ್ಬ ಮಾಧ್ವರು ನಿತ್ಯದಲ್ಲಿ ಪಠಿಸುವಂತಹ ಸ್ತೋತ್ರಗಳಲ್ಲಿ ಅತ್ಯಂತ ಪ್ರಸಿದ್ಧವಾದುದು 'ಶ್ರೀಹರಿವಾಯುಸ್ತುತಿ'. ಈ ಸ್ತೋತ್ರವನ್ನು ರಚಿಸಿದವರು ಕವಿಕುಲತಿಲಕ ಶ್ರೀತ್ರಿವಿಕ್ರಮಪಂಡಿತಾಚಾರ್ಯರು. ೧೩ನೆಯ ಶತಮಾನದ ಈ ಪಂಡಿತಾಚಾರ್ಯರು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸಮಕಾಲೀನರು. ಇವರ ಜನ್ಮಸ್ಥಳ ದಕ್ಷಿಣ ಕರ್ನಾಟಕದ ಕಬೆನಾಡು ಅಂದರೆ ಈಗಿನ ಕೇರಳದ ಕಾಸರಗೋಡು. ಹಿಂದೆ ಈ ಕಾಸರಗೋಡು ತುಳುನಾಡಿನ ರಾಜಧಾನಿಯಂತೆ ಇತ್ತು. ಈಗ ತುಳುನಾಡಿನಿಂದ ಬೇರ್ಪಟ್ಟು ಕೇರಳ ರಾಜ್ಯದ ಒಂದು ಭಾಗವಾಗಿದೆ. ಶ್ರೀತ್ರಿವಿಕ್ರಮಪಂಡಿತಾಚಾರ್ಯರು ವಾಸವಾಗಿದ್ದ ಮನೆ ಕಾವುಮಠ. ಈಗಲೂ ಈ ಮನೆ ಈ ಹೆಸರಿನಿಂದಲೇ ಕಾಸರಗೋಡಿನಲ್ಲಿದೆ. ಅವರ ವಂಶದವರು ಈಗಲೂ ಅಲ್ಲಿ ವಾಸವಾಗಿದ್ದಾರೆ. ತ್ರಿವಿಕ್ರಮ ಪಂಡಿತಾಚಾರ್ಯರ ತಂದೆಯ ಹೆಸರು ಸುಬ್ರಹ್ಮಣ್ಯ ಪಂಡಿತರು. ಇವರು ಆಂಗೀರಸ ಗೋತ್ರದವರು. ಇವರ ವಂಶಕ್ಕೆ 'ಲಿಕುಚ' ಎಂದು ಹೆಸರು. ಲಿಕುಚ ಎಂದರೆ ಗಜನಿಂಬೇ ಗಿಡ. ತುಳುಭಾಷೆಯಲ್ಲಿ 'ಪೇಜಾ' ಎನ್ನುತ್ತಾರೆ. ಪೇಜತ್ತಾಯ ಎಂದರೆ ಲಿಕುಚ ವಂಶದವರು ಎಂದು ಅರ್ಥ. ಈ ಮನೆತನದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರು ವಾಸವಾಗಿದ್ದ ಆ ಕಾಲವನ್ನು ತುಳುನಾಡಿನ ಸುವರ್ಣ ಯುಗವೆಂದು ಕರೆಯಬಹುದು. ಆರ್ಥಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ತುಂಬಾ ಉನ್ನತ ಸ್ಥಿತಿಯಲ್ಲಿದ್ದ ಕಾಲ ಅದು. ಇಮ್ಮಡಿ ಜಯಸಿಂಹ ಮಹಾರಾಜನು ಆ ತುಳುನಾಡಿಗೆ ರಾಜನಾಗಿದ್ದನು. ಅವನ ಕಾಲದಲ್ಲಿ ಆ ತುಳುನಾಡು ಸಂಪತ್ಭರಿತವಾಗಿತ್ತು. ಪ್ರಜೆಗಳು ಸುಖದಿಂದ ಹಾಗೂ ನೆಮ್ಮದಿಯಿಂದ ಜೀವನ ಮಾಡುತ್ತಿದ್ದರು.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಗೆ ಮೂರು ಜನ ಮಕ್ಕಳಿದ್ದರು. ಅವರಲ್ಲಿ ಕೊನೆಯ ಪುತ್ರರೇ ನಾರಾಯಣಪಂಡಿತಾಚಾರ್ಯರು. ಈ ವಿಷಯವನ್ನು ತಮ್ಮ ಸುಮಧ್ವವಿಜಯ ವ್ಯಾಖ್ಯಾನ ಗ್ರಂಥವಾದ ಭಾವಪ್ರಕಾಶಿಕಾದಲ್ಲಿ ಈ ರೀತಿಯಾಗಿ ಹೇಳಿದ್ದಾರೆ :-

**ತ್ರಿವಿಕ್ರಮವಿಪಶ್ಚಿತೋ ಗುಣನಿಧೇಃ ಸುಶಿಷ್ಯಾಃ ಸುತಾಃ ।**
**ಸತಾಮಭಿಮತಾಸ್ತ್ರಯೋ ಯಸ್ತೃತೀಯೋಽತ್ರ ನಾರಾಯಣಃ ॥**

ಶ್ರೀಸುಬ್ರಹ್ಮಣ್ಯಪಂಡಿತರ ವಂಶದಲ್ಲಿ ಬಂದಿರುವ ಎಲ್ಲರಿಗಿಂತಲೂ ಹೆಚ್ಚು ಗ್ರಂಥಗಳನ್ನು ರಚಿಸಿದ ಕೀರ್ತಿ ನಾರಾಯಣಪಂಡಿತಾಚಾರ್ಯರಿಗೆ ಸಲ್ಲುತ್ತದೆ. ಇವರು ಸುಮಾರು ೨೫ ಕ್ಕಿಂತ ಹೆಚ್ಚಾಗಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಪೀಠಾಧಿಪತಿಗಳು, ಸನ್ಯಾಸಿಗಳು, ಗೃಹಸ್ಥಾಶ್ರಮಿಗಳು, ಮಹಾಪಂಡಿತರು ಎಲ್ಲರೂ ಮಾನ್ಯ ಮಾಡಿದ್ದಾರೆ. ಅಲ್ಲದೇ ಅನೇಕ ಪೀಠಾಧಿಪತಿಗಳು ಇವರ ಕೃತಿಗಳಿಗೆ ವ್ಯಾಖ್ಯಾನವನ್ನು ಬರೆದಿದ್ದಾರೆ.

ಒಬ್ಬ ಗೃಹಸ್ಥಾಶ್ರಮಿಯು ಬರೆದ ಗ್ರಂಥಗಳನ್ನು ಪೀಠಾಧಿಪತಿಗಳು ಸ್ವೀಕರಿಸಿ ಗೌರವಿಸಬೇಕಾದರೆ ಆ ಗ್ರಂಥಗಳ ಮಹತ್ವ ಹಾಗೂ ಅವುಗಳನ್ನು ಬರೆದವರ ಮಹತ್ವ ಎಷ್ಟಿರಬಹುದೆಂದು ಊಹೆ ಮಾಡಲು ಸಾಧ್ಯವಿಲ್ಲ. ಇಂತಹ ನಾರಾಯಣಪಂಡಿತಾಚಾರ್ಯರು ಶಿವಸ್ತುತಿ, ನರಸಿಂಹಸ್ತುತಿ, ಯೋಗದೀಪಿಕಾ, ತತ್ತ್ವಮಂಜರೀ, ನಯಚಂದ್ರಿಕಾ, ಸಂಗ್ರಹರಾಮಾಯಣ, ಮಣಿಮಂಜರೀ, ಪ್ರಮೇಯನವಮಾಲಿಕಾ, ಭಾವಪ್ರಕಾಶಿಕಾ ಹಾಗೂ ಶ್ರೀಸುಮಧ್ವವಿಜಯ, ಇತ್ಯಾದಿ ಗ್ರಂಥಗಳನ್ನು ರಚಿಸಿದ ಮಹಾಜ್ಞಾನಿಗಳು. ಇವರ ಅನೇಕ ಗ್ರಂಥಗಳಲ್ಲಿ ಅದ್ಭುತ ಕೃತಿಯಾಗಿ ಸುಮಧ್ವವಿಜಯ ಮಹಾಕಾವ್ಯವು ೧೦೦೮ ಶ್ಲೋಕಗಳಿಂದ ೧೬ ಸರ್ಗಗಳಾಗಿ ಪ್ರಸಿದ್ಧಿ ಹೊಂದಿದೆ. ಈ ಸುಮಧ್ವವಿಜಯದಲ್ಲಿ ಮಹಾಕಾವ್ಯದ ಎಲ್ಲಾ ಲಕ್ಷಣಗಳೂ ಅಡಗಿವೆ. ಭಕ್ತಿರಸವೇ ಪ್ರಧಾನ ರಸವಾಗಿದೆ. ವಾಯುದೇವರ ಮೂರು ಅವತಾರಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಇಂತಹ ಮಂತ್ರತುಲ್ಯವಾದ ಸುಮಧ್ವವಿಜಯದಲ್ಲಿ ಕೆಲವು ಸೂಕ್ತಿಗಳನ್ನು ನಾರಾಯಣಪಂಡಿತಾಚಾರ್ಯರು ಈ ರೀತಿಯಾಗಿ ತಿಳಿಸಿದ್ದಾರೆ.

**"ಜ್ಞಾನಂ ಪರೋಕ್ಷಪದಮಪ್ಯಮತೇಷ್ಟಹೇತುಮ್"**

ಪರೋಕ್ಷಜ್ಞಾನವೂ ಸಹ ಇಷ್ಟಸಾಧನವೆಂದು ಈ ವಾಕ್ಯದ ಅರ್ಥವು. ಈ ಉಕ್ತಿಯನ್ನು ಮಧ್ವವಿಜಯದ ಎರಡನೇ ಸರ್ಗದಲ್ಲಿ ಮಧ್ಯಗೇಹಭಟ್ಟರು ಉಡುಪಿಯ ಅನಂತಾಸನನನ್ನು ಪೂಜಿಸಿ, ಮನೆಯ ಹತ್ತಿರ ಬರುತ್ತಿರಲು ವಿವಾಹಕ್ಕೆಂದು ತೆರಳುತ್ತಿದ್ದ ಗುಂಪೊಂದರ ಮಂಗಳವಾದ್ಯಗಳ ಧ್ವನಿಯು ಕೇಳಿಸಿದವು. ಅದೇ ರೀತಿಯಾಗಿ ಅವರಿಗೆ ಮಗನು ಹುಟ್ಟಿದ ವಾರ್ತೆಯನ್ನು ತಿಳಿದು ಮಹದಾನಂದವನ್ನು ಹೊಂದಿದರು.



ಇಂತಹ ಉಕ್ತಿಯಿಂದ **ಭಗವದ್ದರ್ಶನವಾಗದ ಪರೋಕ್ಷಜ್ಞಾನಿಗಳಿಗೂ ಸಹ ಒಂದು ಬಗೆಯ ವಿಶೇಷ ಆನಂದ ಉಂಟು** ಎಂಬ ತತ್ತ್ವವು ಇಲ್ಲಿ ಧ್ವನಿತವಾಗಿದೆ.

**"ನತಿರ್ನ ಶುಶ್ರೂಷುಜನಾಯ ಶಸ್ಯತೇ"**

ಚಿಕ್ಕವರಿಗೆ ದೊಡ್ಡವರು ನಮಸ್ಕರಿಸುವುದು ವಿಹಿತವಲ್ಲ. ಸಂದರ್ಭ, ವಾಸುದೇವ ಹುಡುಗನಾಗಿದ್ದಾಗ ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತೇನೆ ಎಂದು ಹೇಳಲು, ಆ ವೃದ್ಧ ತಂದೆಯು ಮಗನಾದ ವಾಸುದೇವನಿಗೆ ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡಿದರು. ಇದನ್ನು ಕಂಡ ವಾಸುದೇವನು ಭಗವಂತನೇ ನನಗೆ ಹೀಗೆ ನಿಮ್ಮಿಂದ ಅನುಮತಿಯನ್ನು ಕೊಡಿಸಿಬಿಟ್ಟನು ಎಂದು ಉತ್ತರಿಸಿದನು. **ಸನ್ಯಾಸ ಸ್ವೀಕರಿಸಿದ ಮಗನಿಗೆ ತಂದೆಯೂ ನಮಸ್ಕರಿಸಬೇಕು** ಎಂಬುವ ಉಕ್ತಿಯು ಇಲ್ಲಿ ತಿಳಿದುಬರುತ್ತದೆ.

**"ಸಂತೋ ಹಿ ಗುಣಾಂಶತೋಷಿಣಃ"**

ಗುಣಾಂಶದಿಂದ ಸಂತೋಷಪಡುವುದು ಸಜ್ಜನರ ಸ್ವಭಾವ. ಒಮ್ಮೆ ಗುರುಗಳಾದ ಅಚ್ಯುತಪ್ರೇಕ್ಷರು ಆಕ್ಷೇಪಪೂರ್ವಕವಾಗಿ ಹೀಗೆಂದರು - ''ಬ್ರಹ್ಮಸೂತ್ರಗಳ ಸರಿಯಾದ ಅರ್ಥವನ್ನು ಬಲ್ಲವರಾಗಿದ್ದಲ್ಲಿ ಅವಕ್ಕೆ ನೀವೇ ಒಂದು ಉತ್ತಮವಾದ ಭಾಷ್ಯವನ್ನು ಬರೆಯಬಹುದಲ್ಲ ?'' ಶ್ರೇಷ್ಠವಾದ ಹಂಸಪಕ್ಷಿಯು ವ್ಯರ್ಥವಾದ ನೀರಿನ ಅಂಶವನ್ನು ಬಿಟ್ಟು ಸಾರ್ಥಕವಾದ ಹಾಲಿನ ಅಂಶವನ್ನು ಮಾತ್ರ ಸ್ವೀಕರಿಸುವಂತೆ ಶ್ರೀಪೂರ್ಣಪ್ರಜ್ಞರು ಗುರುಗಳ ಮಾತಿನಲ್ಲಿದ್ದ ನಿರರ್ಥಕವಾದ ಆಕ್ಷೇಪಾಂಶವನ್ನು ಬಿಟ್ಟು **"ಭಾಷ್ಯವನ್ನು ರಚಿಸಿ"** ಎಂಬ ಪರಿಶುದ್ಧವಾದ ಆದೇಶದ ಅಂಶವನ್ನು ಮಾತ್ರವೇ ಸ್ವೀಕರಿಸಿದರು. ಇದರಿಂದ ದೋಷೈಕ ದೃಷ್ಟಿ, ದುರ್ಜನರ ಸ್ವಭಾವ, ಗುಣೈಕ ದೃಷ್ಟಿ, ಸಜ್ಜನರ ಸ್ವಭಾವ ಎಂದು ಭಾವಾರ್ಥ.

**"ನನು ವಿಮೃಶ್ಯ ಕೃತೀ ಕುರುತೇಽಖಿಲಮ್"**

ವಿವೇಕ ಉಳ್ಳವರು ಎಲ್ಲಾ ಕಾರ್ಯಗಳನ್ನು ಚೆನ್ನಾಗಿ ವಿಮರ್ಶಿಸಿಯೇ ಮಾಡುತ್ತಾರೆ. ಒಮ್ಮೆ ತ್ರಿವಿಕ್ರಮಪಂಡಿತಾಚಾರ್ಯರು ಮಧ್ವಾಚಾರ್ಯರನ್ನು ಕಂಡು ನಾನಾ ವಿಧ ಪ್ರಮೇಯಗಳ ಬಗ್ಗೆ ಚರ್ಚೆಯನ್ನು ನಡೆಸಿ ಖಚಿತವಾಗಿಯೂ ''ಇವರ ಸಿದ್ಧಾಂತ ದೋಷರಹಿತವಾದದ್ದು'' ಎಂದು ಮನಗಂಡರು. ಇದರಿಂದ **ತತ್ತ್ವಜಿಜ್ಞಾಸೆಯಂತಹ ಅತ್ಯಂತ ಮಹತ್ವದ ವಿಚಾರವನ್ನು ಚೆನ್ನಾಗಿ ವಿಮರ್ಶಿಸಿ ಅನಂತರವೇ ನಿಶ್ಚಯ ಕೈಗೊಳ್ಳುವುದು ವಿವೇಕಿಗಳ ಸ್ವಭಾವ** ಎಂದು ಅಭಿಪ್ರಾಯವು.

"ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್"

ಸತ್ಪಾತ್ರರಿಗೆ ಕೊಡುವ ದಾನವು ತತ್ತ್ವಜ್ಞಾನ ಸಾಧನವೆಂದು ಇದರ ಅಭಿಪ್ರಾಯವು. ವಾಸುದೇವನು ಮಗುವಾಗಿದ್ದಾಗ ಪೂರ್ವಾಲಯ (ಮುಡಿಲ್ಲಾಯ) ಎಂಬ ಒಬ್ಬರು ತನ್ನ ಮಗನಿಗೆ ಮಗನಾಗಿ ಹುಟ್ಟಿ ಮೋಕ್ಷಸಾಧನವಾದ ಪರಮಾತ್ಮನ ವಿದ್ಯೆಯನ್ನು ಪಡೆದು ಉದ್ಧಾರ ಹೊಂದಿದರು. ಇದರಿಂದ ತಿಳಿಯುವ ಉಕ್ತಿಯು, **ದಾನಪಡೆಯು-ವವನ ಗುಣಗಳನ್ನು ಅನುಸರಿಸಿಯೇ ನಮ್ಮ ದಾನವು ಫಲಿಸುವುದು.**

ಇಂತಹ ಅನೇಕ ಉಕ್ತಿಗಳನ್ನು ಪೇಜತ್ತಾಯ ವಂಶದಲ್ಲಿ ಬಂದ ಕವಿಕುಲತಿಲಕ ನಾರಾಯಣಪಂಡಿತಾಚಾರ್ಯರು ಸುಮಧ್ವವಿಜಯ ಎಂಬ ಗ್ರಂಥದಲ್ಲಿ ಇನ್ನೂ ಅನೇಕ ಉಕ್ತಿಗಳನ್ನು ತಿಳಿಸಿರುತ್ತಾರೆ. ಆ ಎಲ್ಲವನ್ನೂ ಕೂಡಾ ಸಮಗ್ರವಾಗಿ ತಿಳಿಯ-ಬೇಕಾದಲ್ಲಿ ಶ್ರೀಸುಮಧ್ವವಿಜಯ ಮಹಾಕಾವ್ಯವನ್ನು ಗುರುಗಳ ಮುಖಾಂತರ ಚೆನ್ನಾಗಿ ಅಭ್ಯಾಸಮಾಡಬೇಕು.

❑❑

## ಮಕ್ಕಳೊಂದಿಗೆ ಸಂಭ್ರಮಿಸಿದ ರಾಷ್ಟ್ರಪತಿಗಳು

ಆಯ್ದ ೫೦ ಜನ ವಿದ್ಯಾರ್ಥಿಗಳು ರಾಷ್ಟ್ರಪತಿಗಳ ಜೊತೆ ಮಾತನಾಡುವ, ಕೈಕುಲುಕುವ ತವಕದಲ್ಲಿದ್ದರು. ಯಾವುದೇ ಬಿಗಮಾನ, ಬಿಮ್ಮು ಇಲ್ಲದೆ ಸರಳವಾಗಿ ಬೆರೆತ ರೀತಿ ವಿದ್ಯಾರ್ಥಿಗಳನ್ನು, ನೆರೆದವರನ್ನೂ ಮೂಕವಿಸ್ಮಿತರನ್ನಾಗಿಸಿತು. ವೇದ - ಲೌಕಿಕ ವಿದ್ಯೆ ಸಂಗಮವೆಂದು ಕೆಲ ವಿದ್ಯಾರ್ಥಿಗಳು ಉಸುರಿದ್ದು ರಾಷ್ಟ್ರಪತಿಗಳಿಗೆ ಗಮನ ಸೆಳೆಯಿತು. ಪೌರೋಹಿತ್ಯ, ವಿದ್ವಾಂಸ, ವೈದ್ಯ, ಇಂಜಿನಿಯರ್, ವಿಜ್ಞಾನಿ - ಹೀಗೆ ವಿದ್ಯಾರ್ಥಿಗಳು ಕಟ್ಟಿಕೊಂಡ ಕನಸುಗಳನ್ನು ಪ್ರಶ್ನಿಸಿದ ರಾಷ್ಟ್ರಪತಿಗಳು ವಿದ್ಯಾರ್ಥಿಗಳ ತಲೆ ನೇವರಿಸಿ, ಬೆನ್ನು ಚಪ್ಪರಿಸಿದರು.

ಎಲ್ಲರೂ ಎಲ್ಲವನ್ನು ಕಲಿಯಬೇಕು. ನನ್ನ ಗಣಿತ ಗುರುಗಳು ಸಂಸ್ಕೃತವನ್ನು ಚೆನ್ನಾಗಿ ಕಲಿತಿದ್ದರು ಎಂದು ರಾಷ್ಟ್ರಪಿತ ತಿಳಿಹೇಳಿ ಆಳವಾಗಿ ಅರಿತು ದೇಶದ ಸಂಸ್ಕೃತಿ ಸೀಮಂತಗೊಳಿಸಲು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.

ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.

ವಿಳಾಸಗಳು ಮುಖಪುಟದಲ್ಲಿವೆ.





# ಗೀತಾವಿವೃತಿ
## (ಕನ್ನಡಾನುವಾದ)

■ ಅನುವಾದ : ಪಂಡಿತರತ್ನ, ವಿದ್ಯಾವಾಚಸ್ಪತಿ **ಡಾ. ಆರ್.ಜಿ. ಮಾಳಗಿ**
ನಂ. ೨೬೬/೪, ೩ನೇ ಮುಖ್ಯರಸ್ತೆ, ೬ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು - ೧೯

**ಹಿಂದಿನ ಸಂಚಿಕೆಯಿಂದ.......**

**"ಎಲ್ಲರೂ ಶೂರರೇ ಆಗಿದ್ದಾರೆ" ಅಥವಾ "ಎಲ್ಲರೂ ನನಗಾಗಿಯೇ ಪ್ರಾಣ-ತ್ಯಾಗಮಾಡಲು ಸಿದ್ಧರಾಗಿದ್ದಾರೆ" - ಹೀಗೆ ಎರಡು ರೀತಿಯಾಗಿ ಅವಧಾರಣಾರ್ಥಕ 'ಚ' ಎಂಬ ಶಬ್ದಕ್ಕೆ ಅನ್ವಯ ಹೇಳಬೇಕು. ತ್ಯಕ್ತಜೀವಿತಾಃ = ಪ್ರಾಣತ್ಯಾಗಮಾಡಲು ನಿಶ್ಚಯಿಸಿ-ದವರು. ಪ್ರಹರಣಾನಿ = ಅಸ್ತ್ರಗಳು, ನಾನಾವಿಧವಾದ ಶಸ್ತ್ರಗಳು ಮತ್ತು ಅಸ್ತ್ರಗಳುಳ್ಳ-ವರು. (ನಾನಾವಿಧವಾದ ಶಸ್ತ್ರಾಸ್ತ್ರಗಳನ್ನು ಬಲ್ಲವರು). ಯುದ್ಧವಿಶಾರದಾಃ = ಯುದ್ಧದಲ್ಲಿ ಕುಶಲರಾದವರು ॥ ೯ ॥**

ಮೂಲದಲ್ಲಿ ಅವಧಾರಣಾರ್ಥಕವಾದ 'ಏವ' ಶಬ್ದವು ಇಲ್ಲ. ಆದರೆ ರಾಯರು 'ಏವ' ಎಂಬ ಶಬ್ದಕ್ಕೆ ಎರಡು ರೀತಿಯಾಗಿ ಅನ್ವಯವನ್ನು ತೋರಿಸಿದ್ದಾರೆ. ಆದ್ದರಿಂದ ಮೂಲದಲ್ಲಿರುವ 'ಚ' ಶಬ್ದಕ್ಕೆ 'ಏವ' ಎಂದು ಅರ್ಥಮಾಡಿ, ಆ ಏವ ಶಬ್ದವನ್ನು ಎರಡು ರೀತಿ ಅನ್ವಯಿಸಬೇಕು. ಇದು ರಾಯರಿಗೆ ಸಮ್ಮತ ಎನಿಸುತ್ತದೆ.

**ವಿವರಣೆ - "ಸರ್ವಶಸ್ತ್ರಪ್ರಹರಣಾಃ"** ಎಂಬ ಶಬ್ದವನ್ನು ರಾಯರು ಸ್ವರಸ-ವಾಗಿ ವ್ಯಾಖ್ಯಾನಿಸಿದ್ದಾರೆ. "ಪ್ರಹ್ರಿಯಂತೇ ಏಭಿರಿತಿ ಪ್ರಹರಣಾನಿ = ಅಸ್ತ್ರಾಣಿ" ಯಾವುದರಿಂದ ಶತ್ರುಗಳು ಚೆನ್ನಾಗಿ ನಾಶಮಾಡಲ್ಪಡುತ್ತಾರೆಯೋ ಅವುಗಳು ಪ್ರಹರಣ-ಗಳು ಎಂದರೆ ಅಸ್ತ್ರಗಳು. 'ಸರ್ವಾಣಿ ಶಸ್ತ್ರಾಣಿ ಪ್ರಹರಣಾನಿ ಚ ಏಷಾಂ ತೇ ಸರ್ವಶಸ್ತ್ರ ಪ್ರಹರಣಾಃ' ಎಲ್ಲಾ ಶಸ್ತ್ರಗಳು ಮತ್ತು ಅಸ್ತ್ರಗಳು ಯಾರಿಗೆ ಇವೆಯೋ (ಸ್ವಾಧೀನವಾಗಿ ಇವೆಯೋ) ಅವರು ಸರ್ವಶಸ್ತ್ರಪ್ರಹರಣರು. **ಅಸ್ತ್ರ ಎಂದರೆ, ಬಾಣದಲ್ಲಿ ದೇವತೆ-ಗಳನ್ನು ಅಭಿಮಂತ್ರಿಸಿ, ಆಹ್ವಾನಿಸಿ, ಆ ದೇವತೆಯನ್ನು ಪ್ರಾರ್ಥಿಸಿ ಬಿಡುವ ಬಾಣಗಳಿಗೆ ಅಸ್ತ್ರಗಳು ಎನ್ನುತ್ತಾರೆ. ಅಭಿಮಂತ್ರಿಸದೇ ಪ್ರಯೋಗಿಸುವ ಬಾಣಗಳಿಗೆ "ಶಸ್ತ್ರ" ಎನ್ನುತ್ತಾರೆ.**

## ಭಗವದ್ಗೀತೆ - ದುರ್ಯೋಧನನ ಅನಿಸಿಕೆ

**ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।**
**ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್ ॥ ೧೦ ॥**

**ಅನುವಾದ** –''ಭೀಷ್ಮರಿಂದ ರಕ್ಷಿಸಲ್ಪಟ್ಟ, ಹಿಂದೆ ಹೇಳಿದ ಬಲಿಷ್ಠ ನಾಯಕ-ರಿಂದ ಕೂಡಿದ ನಮ್ಮ ಸೇನೆಯು ಪಾಂಡವರನ್ನು ಗೆಲ್ಲಿಸಲು ಸಮರ್ಥವಾಗಲಾರ-ದೆಂದು ನನಗ ಅನಿಸುತ್ತಿದೆ. ಆದರೆ ಭೀಮನಿಂದ ರಕ್ಷಿಸಲ್ಪಟ್ಟ ಪಾಂಡವರ ಈ ಸೇನೆಯು ಮಾತ್ರ ನಮ್ಮನ್ನು ಗೆಲ್ಲಲು ಸಮರ್ಥವಾದೀತೆಂದು ನನಗೆ ಅನ್ನಿಸುತ್ತಿದೆ'' ॥ ೧೦ ॥

## ಗೀತಾವಿವೃತಿ

**ಬಲದ್ವಯೇ ಬಲಿಷ್ಠಪರಿಗಣನೇ ಪಾಂಡವವಿಜಯೇ ಮಮ ಸಂದೇಹೋಽಸ್ತಿ । ತತೋ ಭವದಾದಯಃ ಸರ್ವೇ ಬಹುಸನ್ನದ್ಧಾಃ ಭವಂತು ಇತಿ ಭಾವೇನ ಆಹ - ಅಪರ್ಯಾಪ್ತಮಿತಿ । ಸೇನಾಪತಿಭೂತ ಭೀಷ್ಮಾಭಿರಕ್ಷಿತಂ । ಅಸ್ಮಾಕಂ ತತ್ ಪ್ರಾಗುಕ್ತಬಲಿಷ್ಠೋಪೇತಂ ಬಲಂ ಅಪರ್ಯಾಪ್ತಂ, ಪಾಂಡವಜಯೇ ನ ಸಮರ್ಥಂ ಪ್ರತೀಯತೇ । ಭೀಮಾಭಿರಕ್ಷಿತಂ ಇದಂ ಪಾಂಡವಾನಾಂ ಬಲಂ ತು ಪರ್ಯಾಪ್ತಂ ಅಸ್ಮದ್ವಿಜಯೇ ಶಕ್ತಂ ಪ್ರತೀಯತೇ ॥ ೧೦ ॥**

**ಅನುವಾದ** – ಎರಡೂ ಸೈನ್ಯಗಳಲ್ಲಿರುವ ವೀರರನ್ನು ಗಮನಿಸಿದಾಗ ಪಾಂಡವ-ರನ್ನು ನಾವು ಗೆಲ್ಲುವುದರಲ್ಲಿ ನನಗೇನೋ ಸಂದೇಹವೇ ಇದೆ. ಆದ್ದರಿಂದ ನೀವೆಲ್ಲರೂ ಬಹಳ ಸನ್ನದ್ಧರಾಗಿ ಇರಬೇಕಾಗುತ್ತದೆ ಎಂಬ ಅಭಿಪ್ರಾಯದಿಂದ ದುರ್ಯೋಧನನು ಮುಂದಿನ ''ಅಪರ್ಯಾಪ್ತಂ'' ಎಂಬ ಶ್ಲೋಕವನ್ನು ಹೇಳುತ್ತಾನೆ.

ಸೇನಾಪತಿಗಳಾದ ಭೀಷ್ಮರಿಂದ ರಕ್ಷಿತನಾದ, ಹಿಂದೆ ಹೇಳಿದ ಬಲಿಷ್ಠರಿಂದ ಕೂಡಿದ ನಮ್ಮ ಆ ಸೈನ್ಯವು ಅಪರ್ಯಾಪ್ತಂ = ಪಾಂಡವರನ್ನು ಗೆಲ್ಲಲು ಸಮರ್ಥ-ವಾಗಲಾರದು ಎಂದು ನನಗೆ ಅನ್ನಿಸುತ್ತಿದೆ. ಭೀಮಸೇನನಿಂದ ರಕ್ಷಿತವಾದ ಈ ಪಾಂಡವರ ಸೇನೆಯಂತೂ, ಪರ್ಯಾಪ್ತಂ = ನಮ್ಮನ್ನು ಗೆಲ್ಲಲು ಸಮರ್ಥವಾಗಿದೆ ಎಂದು ನನಗೆ ಅನಿಸುತ್ತದೆ.

## ಭಗವದ್ಗೀತೆ

**ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।**
**ಭೀಷ್ಮಮೇವಾಭಿರಕ್ಷಂತು ಭವಂತಃ ಸರ್ವ ಏವ ಹಿ ॥ ೧೧ ॥**



**ಅನುವಾದ** - (ಆದ್ದರಿಂದ ಭೀಷ್ಮರು ಶತ್ರುಗಳೊಡನೆ ಯುದ್ಧಮಾಡುತ್ತಿರು-ವಾಗ ಯಾರಾದರೂ ಶತ್ರುಗಳು ಬಂದು ಹಿಂದಿನಿಂದ ಅವರನ್ನು ಹೊಡೆಯದಂತೆ) ನೀವೆಲ್ಲರೂ ವ್ಯೂಹಪ್ರವೇಶ ಮಾರ್ಗಗಳಲ್ಲಿನ ನಿಮ್ಮ ನಿಮ್ಮ ಸ್ಥಳಗಳಲ್ಲಿ ದೃಢವಾಗಿ ನಿಂತು ಭೀಷ್ಮರನ್ನು ರಕ್ಷಿಸಿರಿ. ॥ ೧೧ ॥

## ಗೀತಾವಿವೃತಿ

**ಹಿ ಯಸ್ಮಾದೇವಮತೋ ಭವಂತಃ ಸರ್ವ ಏವ ಸರ್ವೇಷ್ವಯನೇಷು = ವ್ಯೂಹ-ಪ್ರವೇಶಮಾರ್ಗೇಷು, ಯಥಾಭಾಗಮವಸ್ಥಿತಾಃ = ಸ್ವ ಸ್ವ ರಣಭೂಮಿಸ್ಥಾನೇಷು ದೃಢಂ ಅವಸ್ಥಿತಾಃ ಸಂತಃ ಭೀಷ್ಮಮೇವ ಅಭಿರಕ್ಷಂತು । ಅನ್ಯೈಃ ಯುಧ್ಯಮಾನೋ ಭೀಷ್ಮಃ ಪೃಷ್ಠತೋ ಅರಿಭಿರ್ಯಥಾ ನ ಹನ್ಯತೇ ತಥಾ ರಕ್ಷಂತು ಇತಿ ದ್ರೋಣಾಚಾರ್ಯಮುಕ್ತ್ವಾ ವಿಷಸಾದ ॥ ೧೧ ॥**

**ಅನುವಾದ** –''ಹಿ = ಹಿಂದೆ ಹೇಳಿದ ಕಾರಣದಿಂದ ನೀವೆಲ್ಲರೂ, ಸರ್ವೇಷು ಅಯನೇಷು = ಎಲ್ಲ ವ್ಯೂಹಪ್ರವೇಶ ಮಾರ್ಗಗಳಲ್ಲಿ ಯಥಾಭಾಗಮವಸ್ಥಿತಾಃ = ನಿಮ್ಮ ನಿಮ್ಮ ಯುದ್ಧರಂಗದ ಸ್ಥಳಗಳಲ್ಲಿ ದೃಢವಾಗಿ ನಿಂತಿರುವವರಾಗಿ ಭೀಷ್ಮಾ-ಚಾರ್ಯರನ್ನೇ ರಕ್ಷಿಸಿರಿ. ಸೇನಾಪತಿಗಳಾದ ಭೀಷ್ಮರು ಶತ್ರುಗಳ ಜೊತೆಯಲ್ಲಿ ಕಾದಾಡುತ್ತಿರುವಾಗ ಹಿಂದಿನಿಂದ ಯಾರಾದರೂ ಶತ್ರುಗಳು ಬಂದು ಅವರನ್ನು ಹಿಂಸಿಸದಂತೆ ಜಾಗರೂಕರಾಗಿ ಅವರನ್ನು ರಕ್ಷಿಸಿರಿ'' ಎಂದು ಆಚಾರ್ಯ ದ್ರೋಣ-ರನ್ನು ಕುರಿತು ಹೇಳಿ ದುರ್ಯೋಧನನು ಸುಮ್ಮನಾದನು.

## ಭಗವದ್ಗೀತೆ - ಶಂಖನಾದಗಳ ವಿವರ

**ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।**
**ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್ ॥ ೧೨ ॥**

**ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।**
**ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್ ॥ ೧೩ ॥**

**ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।**
**ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥ ೧೪ ॥**

**ಪಾಂಚಜನ್ಯಂ ಹೃಷೀಕೇಶಃ ದೇವದತ್ತಂ ಧನಂಜಯಃ ।**
**ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥ ೧೫ ॥**

**ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।**
**ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ ॥ ೧೬ ॥**

**ಅನುವಾದ –** ಈ ರೀತಿ ನಿರಾಶೆಗೊಂಡ ದುರ್ಯೋಧನನಿಗೆ ಉತ್ಸಾಹವನ್ನು ಉಂಟುಮಾಡಲು ಪರಾಕ್ರಮಶಾಲಿಗಳೂ, ಕುರುಕುಲಕ್ಕೆ ಹಿರಿಯರೂ ಆದ ಪಿತಾಮಹರಾದ ಭೀಷ್ಮಾಚಾರ್ಯರು ಗಟ್ಟಿಯಾಗಿ ಸಿಂಹದಂತೆ ಗರ್ಜಿಸಿ, ಶಂಖನಾದ ಮಾಡಿದರು. ॥ ೧೨ ॥

ಭೀಷ್ಮರ ಶಂಖನಾದವಾದ ನಂತರ ಶಂಖಗಳು, ನಗಾರಿಗಳು, ಡೋಲು, ತಮಟೆ, ಕಹಳೆ ಇವುಗಳೆಲ್ಲವೂ ಏಕಕಾಲದಲ್ಲಿ ಮೊಳಗಿಸಲ್ಪಟ್ಟವು, ಆ ಶಬ್ದವು ಎಲ್ಲೆಡೆ ಆವರಿಸಿತು. ॥ ೧೩ ॥

ಶ್ರೀಕೃಷ್ಣನು ''ಪಾಂಚಜನ್ಯ'' ಎಂಬ ಮಹಾಶಂಖವನ್ನೂ, ಅರ್ಜುನನು ದೇವದತ್ತವೆಂಬ (ದೇವದತ್ತವಾದ) ಮಹಾಶಂಖವನ್ನೂ, ಶತ್ರುಗಳಿಗೆ ಭಯವುಂಟಾಗುವಂತೆ ಯುದ್ಧಮಾಡುವ ಸ್ವಭಾವವುಳ್ಳ ಭೀಮನು ಪೌಂಡ್ರ ಎಂಬ ಮಹಾಶಂಖವನ್ನು ಊದಿದರು. ॥ ೧೫ ॥

ಕುಂತಿಯ ಮಗನೂ, ರಾಜನೂ ಆದ ಧರ್ಮರಾಜನು ಅನಂತವಿಜಯ ಎಂಬ ಹೆಸರುಳ್ಳ ಶಂಖವನ್ನೂ, ನಕುಲ-ಸಹದೇವರು ಸುಘೋಷ ಮತ್ತು ಮಣಿಪುಷ್ಪಕ ಎಂಬ ಹೆಸರುಳ್ಳ ಮಹಾಶಂಖಗಳನ್ನೂ ಊದಿದರು. ॥ ೧೬ ॥

## ಗೀತಾವಿವೃತಿ

**ಏವಂ ವಿಷಾದಿನಃ ತಸ್ಯ ದುರ್ಯೋಧನಸ್ಯ ಹರ್ಷಂ ಸಂಜನಯನ್ = ಜನಯಿತುಮ್ । "ಲಕ್ಷಣ ಹೇ ಕ್ರಿಯಾಯಾಃ" ಇತಿ ಹೇತೌ ಶತ್ರಂತಂ । ಪ್ರತಾಪವಾನ್ ಕುರುವೃದ್ಧಃ ಪಿತಾಮಹಃ ಭೀಷ್ಮಃ ಸಿಂಹನಾದಂ ಉಚ್ಚೈಃ ವಿನದ್ಯ ಶಂಖಂ ದಧ್ಮೌ (ಧ್ಮಾ) ಧ್ಮಾ ಶಬ್ದೇ ॥ ೧೨ ॥**

**ತತಃ ತಚ್ಛಂಖಧ್ವಾನಾನಂತರಂ ಪಣವಾನಕಗೋಮುಖಾಃ = ವಾದ್ಯವಿಶೇಷಾಃ, ಸಹಸೈವ = ಯುಗಪದೇವ । ತುಮುಲಃ = ಸರ್ವತ್ರ ಪರಿಪೂರ್ಣೋ ಅಭವತ್ ॥ ೧೩ ॥**

**ತತಃ = ತೇಷಾಂ ಘೋಷಾನಂತರಂ ಶ್ವೇತಹಯೈಃ = ಶುಕ್ಲವರ್ಣಾಶ್ವೈಃ, ಯುಕ್ತೇ ಸ್ಯಂದನೇ = ರಥೇ ಪಾಂಡವಸ್ತ್ವರ್ಜುನಃ । ಸ್ಥಿತಾವೇವೇತ್ಯನ್ವಯಃ ॥ ೧೪ ॥**

**ತದ್ವಿವೃಣೋತಿ – ಪಾಂಚಜನ್ಯಮಿತಿ । ಹೃಷೀಕೇಶಶಬ್ದಾರ್ಥಃ ಉಕ್ತೋ ಭಾಷ್ಯೇ ಏಕಾದಶೇ । "ಹೃಷೀಕಾಣಾಂ ಇಂದ್ರಿಯಾಣಾಂ ಈಶತ್ವಾಚ್ಚ ಹೃಷೀಕೇಶಃ" ಇತ್ಯಾದಿ । ದಧ್ಮಾವಿತ್ಯನ್ವಯಃ ॥ ೧೫ ॥**



**ಅನಂತವಿಜಯಂ = ಅನಂತವಿಜಯಾಖ್ಯಂ । ನಕುಲಃ ಸುಘೋಷಾಖ್ಯಂ ಶಂಖಂ, ಸಹದೇವಃ ಮಣಿಪುಷ್ಪಕಾಖ್ಯಂ ದಧ್ಮುರಿತ್ಯನ್ವಯಃ ॥ ೧೬ ॥**

**ಅನುವಾದ –** ಈ ರೀತಿಯಾಗಿ ವಿಷಾದವನ್ನು ಹೊಂದಿದ ದುರ್ಯೋಧನನಿಗೆ ಸಂತೋಷವನ್ನು, ಸಂಜನಯನ್ = ಉಂಟುಮಾಡಲು, ''ಲಕ್ಷಣ ಹೇತೌ ಕ್ರಿಯಾಯಾಂ'' ಎಂಬ ಪಾಣಿನೀಸೂತ್ರದ ಪ್ರಕಾರ ಹೇತ್ವರ್ಥದಲ್ಲಿ ಶತೃಪ್ರತ್ಯಯ ಬಂದು ಸಂಜನಯನ್ ಒಂದು ರೂಪವಾಗಿದೆ. ಸಂತೋಷವನ್ನು ಉಂಟುಮಾಡುವುದಕ್ಕೋಸ್ಕರವಾಗಿ ಎಂದು ಅರ್ಥ. ಪ್ರತಾಪಶಾಲಿಯಾದ ಕುರುಕುಲ ಪಿತಾಮಹರಾದ ಆಚಾರ್ಯ ಭೀಷ್ಮರು ಸಿಂಹನಾದವನ್ನು ಗಟ್ಟಿಯಾಗಿಮಾಡಿ ತಮ್ಮ ಶಂಖವನ್ನು ಊದಿದರು. 'ದಧ್ಮೌ' ಎಂಬ ರೂಪವು ''ಧ್ಮಾ ಶಬ್ದೇ'' ಎಂಬ ಧಾತುವಿನಿಂದ ಉಂಟಾಗಿದೆ. ಶಬ್ದಮಾಡಿದರು ಎಂದರೆ ಊದಿದರು ಎಂದು ಅರ್ಥ. ॥ ೧೨ ॥

ತತಃ = ಭೀಷ್ಮಾಚಾರ್ಯರ ಶಂಖನಾದಾನಂತರದಲ್ಲಿ, ಪಣವಾನಕಗೋಮುಖಾಃ = ಡೋಲು, ತಮಟೆ, ಕಹಳೆ ಮುಂತಾದ ಎಲ್ಲ ಯುದ್ಧವಾದ್ಯಗಳು, ಸಹಸೈವ = ಒಟ್ಟಿಗೇ, ತುಮುಲಃ = ಎಲ್ಲ ಕಡೆಯಲ್ಲಿಯೂ, ಪರಿಪೂರ್ಣವಾದವು (ವ್ಯಾಪಿಸಿದವು). ॥ ೧೩ ॥

ತತಃ = ಆ ವಾದ್ಯಗಳ ಶಬ್ದದ ಅನಂತರದಲ್ಲಿ, ಶ್ವೇತಹಯೈಃ = ಬಿಳಿಬಣ್ಣದ ಕುದುರೆಗಳಿಂದ ಕೂಡಿದ, ಸ್ಯಂದನೇ = ರಥದಲ್ಲಿ, ಪಾಂಡವಸ್ತು = ಅರ್ಜುನನಾದರೂ, ಕೃಷ್ಣ ಮತ್ತು ಅರ್ಜುನರಿಬ್ಬರೂ ರಥದಲ್ಲಿ ಕುಳಿತುಕೊಂಡೇ ಶಂಖಗಳನ್ನು ಊದಿದರು. ॥ ೧೪ ॥

**ವಿವರಣೆ –** ಪಾಂಡವಶ್ಚೈವ ಎಂಬಲ್ಲಿರುವ 'ಏವ' ಕಾರವನ್ನು ಸ್ಥಿತಾವೇವ ಎಂಬುದಾಗಿ ಸ್ಥಿತೌ ಶಬ್ದದ ಜೊತೆಯಲ್ಲಿ ಅನ್ವಯಿಸಬೇಕು. ಅಂದರೆ ಕೃಷ್ಣಾರ್ಜುನರಿಬ್ಬರೂ ರಥದಲ್ಲಿ ಕುಳಿತುಕೊಂಡೇ ಶಂಖವನ್ನು ಊದಿದರು ಎಂದು ಅರ್ಥವಾಗುತ್ತದೆ.

ಆ ಶಂಖದ ಊದುವಿಕೆಯನ್ನೇ 'ಪಾಂಚಜನಂ' ಎಂಬ ಶ್ಲೋಕದಿಂದ ವಿವರಿಸುತ್ತಾರೆ. ಭಾಗವತ ಏಕಾದಶ ಸ್ಕಂಧ ತಾತ್ಪರ್ಯದಲ್ಲಿ (ಭಾಷ್ಯದಲ್ಲಿ) ಹೃಷೀಕೇಶ ಶಬ್ದದ ಅರ್ಥವನ್ನು ಆಚಾರ್ಯರು ಹೀಗೆ ವಿವರಿಸಿದ್ದಾರೆ – ಹೃಷೀಕಾಣಾಂ = ಇಂದ್ರಿಯಗಳಿಗೆ, ಈಶತ್ವಾಚ್ಚ = ಒಡೆಯನಾದುದರಿಂದಲೂ (ಪ್ರೇರಕನಾದುದರಿಂದಲೂ) ಕೃಷ್ಣನು ಹೃಷೀಕೇಶನಾಗಿದ್ದಾನೆ, ಇತ್ಯಾದಿಯಾಗಿ.

ದಧ್ಮೌ ಎಂಬ ಕ್ರಿಯಾಪದವನ್ನು ಮೂರು ಕಡೆಯಲ್ಲಿಯೂ ಅನ್ವಯಿಸಬೇಕು. ಶ್ರೀಕೃಷ್ಣನು 'ಪಾಂಚಜನ್ಯ' ಎಂಬ ಹೆಸರುಳ್ಳ ಶಂಖವನ್ನು ಊದಿದನು. ಅರ್ಜುನನು 'ದೇವದತ್ತ' ಎಂಬ ಹೆಸರುಳ್ಳ (ದೇವತೆಗಳಿಂದ ಕೊಡಲ್ಪಟ್ಟ) ಶಂಖವನ್ನು ಊದಿದನು. ಸಾಹಸಕಾರ್ಯಗಳಲ್ಲಿ ಸಮರ್ಥನಾದ ಭೀಮಸೇನನು 'ಪೌಂಡ್ರ' ಎಂಬ ಹೆಸರುಳ್ಳ ಶಂಖವನ್ನು ಊದಿದನು. ॥ ೧೫ ॥

ಅನಂತವಿಜಯಂ = ಅನಂತವಿಜಯ ಎಂಬ ಹೆಸರುಳ್ಳ, ನಕುಲನು ಸುಘೋಷ ಎಂಬ ಹೆಸರುಳ್ಳ ಶಂಖವನ್ನು, ಸಹದೇವನು 'ಮಣಿಪುಷ್ಪಕ' ಎಂಬ ಹೆಸರುಳ್ಳ ಶಂಖವನ್ನು, ದಧ್ಮೌ ಎಂಬ ಕ್ರಿಯಾಪದವನ್ನು ಮೂರೂ ಕಡೆ ಅನ್ವಯಿಸಬೇಕು.

ರಾಜಾ ಯುಧಿಷ್ಠಿರನು 'ಅನಂತವಿಜಯ' ಎಂಬ ಹೆಸರುಳ್ಳ ಶಂಖವನ್ನು ಊದಿದನು. ನಕುಲನು 'ಸುಘೋಷ' ಎಂಬ ಹೆಸರುಳ್ಳ ಶಂಖವನ್ನು ಊದಿದನು. ಸಹದೇವನು 'ಮಣಿಪುಷ್ಪಕ' ಎಂಬ ಹೆಸರಿನ ಶಂಖವನ್ನು ಊದಿದನು. ॥ ೧೬ ॥

**(ಮುಂದುವರೆಯುವುದು)**


## ಶ್ರೀರಘುನಂದನ ವಿದ್ಯಾಪೀಠಕ್ಕೆ ಪ್ರವೇಶಾವಕಾಶ

ಆಧುನಿಕ ವಿದ್ಯಾಭ್ಯಾಸದೊಂದಿಗೆ ಪ್ರಾಚೀನ ವಿದ್ಯಾಭ್ಯಾಸ

ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನಂಜನಗೂಡಿನಲ್ಲಿ ಪ್ರಾರಂಭಿಸಲಾಗಿರುವ ಮೇಲ್ಕಂಡ ವಿದ್ಯಾಪೀಠಕ್ಕೆ ೨೦೦೭-೨೦೦೮ ರ ಪ್ರವೇಶಾವಕಾಶಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಗುರುಕುಲದಲ್ಲಿ ಆಧುನಿಕ ವಿದ್ಯಾಭ್ಯಾಸದೊಂದಿಗೆ ಪ್ರಾಚೀನ ವಿದ್ಯೆಗಳನ್ನು ಕಲಿಸಿಕೊಡಲಾಗುವುದು. (ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಸರ್ಕಾರದ ಪಠ್ಯಕ್ರಮ) ಶಾಲೆಯ ಜೊತೆಯಲ್ಲಿ ಮಂತ್ರ, ವೇದ, ಸಂಸ್ಕೃತ ಹಾಗೂ ಶಾಸ್ತ್ರಾಭ್ಯಾಸವನ್ನು ನುರಿತ ವಿದ್ವಾಂಸರಿಂದ ಹೇಳಿಕೊಡಲಾಗುವುದು.

೧ ನೇ ತರಗತಿಯಿಂದ ೭ ನೇ ತರಗತಿಯ ವಿದ್ಯಾರ್ಥಿಗಳವರೆಗೆ ಪ್ರವೇಶಾವಕಾಶ.

**"ಪ್ರವೇಶಾವಕಾಶ ಉಚಿತ"**

**ಸಂಪರ್ಕಿಸಿ : ಗುರುಕುಲ, ನಂಜನಗೂಡು - 08221-228544**
**ಸಂಚಾರಿ ದೂರವಾಣಿ - 9342651516**






# ಹುಲಿಯ ಪೊದೆಯಿಂದ ಎದ್ದು ಬಂದ ಪ್ರಾಣೇಶ!

■ ಶ್ರೀಮತಿ ಕಾಕೋಳು ಸರೋಜಮ್ಮ
'ಚಂದ್ರಿಕಾ', ನಂ. ೨೨, ಪಿಟೀಲು ಚೌಡಯ್ಯ ರಸ್ತೆ, ೬ನೇ ದೇವಾಲಯ

ಭಾರತ ಪುಣ್ಯಕ್ಷೇತ್ರಗಳ ತವರೂರು, ಸಾಧುಸಂತರ ನೆಲೆವೀಡು, ಸಾಧಕರ ತಪೋಭೂಮಿ, ಕರ್ಮಯೋಗಿಗಳ ಕಮ್ಮಟ. ಅದರಲ್ಲಿಯೂ ತತ್ವ, ಧರ್ಮ, ಸಂಸ್ಕೃತಿ, ವಿವಿಧ ವಿದ್ಯೆಗಳು, ಸಂಗೀತ, ಸಾಹಿತ್ಯಾದಿ ಕಲೆಗಳು ಶೌರ್ಯ, ಔದಾರ್ಯ, ಸೌಶೀಲ್ಯ, ಪರೋಪಕಾರಾದಿಗಳಿಗೆ ಮಾತೃಸ್ಥಾನವೆನಿಸಿದೆ. ತೀರ್ಥಕ್ಷೇತ್ರಗಳ, ದೇವಾಲಯಗಳ ಬೀಡು ಕನ್ನಡನಾಡು. ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲ್ಲೂಕಿನ ಚೋರನೂರಿಗೆ ಮೂರು ಮೈಲು ದೂರದಲ್ಲಿರುವ -''ಬೊಮ್ಮಾಗಟ್ಟೆ''- ಕ್ಷೇತ್ರ ಬಹು ಜಾಗೃತ ಕ್ಷೇತ್ರ. ''ಶ್ರೀಹುಲಿಕುಂಟೇ ಪ್ರಾಣದೇವರು'' ಎಂದು ಪ್ರಸಿದ್ಧವಾದ ಶ್ರೀಬೊಮ್ಮಾಗಟ್ಟೆ ಕ್ಷೇತ್ರ ಮೂರ್ತಿಯು ವಿಜಯನಗರ ಕಾಲಕ್ಕಿಂತಲೂ ಪ್ರಾಚೀನಕಾಲದ ಆಂಜನೇಯನ ಸುಂದರ ಶಿಲಾವಿಗ್ರಹ. ಶ್ರೀಚಂದ್ರಿಕಾಚಾರ್ಯರಿಂದ ಈಗಿರುವ ಸ್ಥಳದಲ್ಲಿ ಸ್ಥಿರ ಪ್ರತಿಷ್ಠೆ ಮಾಡಲ್ಪಟ್ಟ ಈ ಆಂಜನೇಯದೇವರು ಈ ಪ್ರಾಂತದ ಅನೇಕ ಮನೆತನದವರ ಕುಲದೇವರು.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಕೇಂದ್ರದಿಂದ ಹನ್ನೆರಡು ಮೈಲು ದೂರದಲ್ಲಿರುವ ಈ ಸ್ಥಳಕ್ಕೆ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳು ಓಡಾಡುತ್ತವೆ. ಈ ಕ್ಷೇತ್ರದ ಉತ್ತರಕ್ಕೆ ಸ್ಕಂದಪುರಾಣದಲ್ಲಿ ಪ್ರಸಿದ್ಧವಾದ ಕಾರ್ತಿಕೇಯ - ಕುಮಾರಸ್ವಾಮಿಯ ಆವಾಸಸ್ಥಾನವಿದೆ. ಬೊಮ್ಮಾಗಟ್ಟೆ ಗ್ರಾಮದಿಂದ ಸ್ವಲ್ಪ ದೂರದಲ್ಲಿ ನಿಸರ್ಗ ರಮಣೀಯ ಪರಿಸರದಲ್ಲಿ ಇರುವ ದೇವಾಲಯಕ್ಕೆ ಹೋಗುವ ಮೊದಲು ದುರ್ಗಾದೇವಿಗೆ, ''ಮಾರ್ಗದಯ್ಯ''ನೆಂಬ ಹೆಸರಿನ ಪ್ರಾಣದೇವರಿಗೆ ನಮಸ್ಕರಿಸಿ, ಮುಂದೆ ಬಂದರೆ ಊರ ಮುಂದಿನ ಪ್ರಾಣದೇವರ ದರ್ಶನವಾಗುತ್ತದೆ. ಗ್ರಾಮದೇವತೆ ಭಾರತೀದೇವಿಯ ಗುಡಿಯೂ ಇಲ್ಲಿಯೇ ಇದೆ. ದೇವಾಲಯದ ಪಕ್ಕದಲ್ಲಿಯೇ ಸಿಹಿನೀರಿನ ಪುಷ್ಕರಿಣಿ ಇದೆ. ಪುಷ್ಕರಣಿಯ ದಡದಲ್ಲಿ ಶ್ರೀರುದ್ರದೇವರು, ಅದಕ್ಕೆ ಹೊಂದಿಕೊಂಡು ಅಶ್ವತ್ಥನಾರಾಯಣ, ಅದರ ಪಕ್ಕದಲ್ಲಿ ದೇವಾಲಯದ ಪೂರ್ವದ್ವಾರವಿದೆ.

**ಸ್ಥಳಪುರಾಣ :**

ಜಗತ್ಪ್ರಾಣರಾದ ಪ್ರಾಣದೇವರು ಸತ್ಯಲೋಕದಿಂದ ಆಗಮಿಸಿ ಹುಲಿಕುಂಟೇ ಕಾಡಿನ ಹುಲಿಪೊದೆಯೊಂದರಲ್ಲಿ ಗೂಢವಾಗಿ ನೆಲೆಸಿದ್ದರೆಂದು ಪ್ರತೀತಿ. ವಿಗ್ರಹದ

ಮೇಲೆ ಸೂರ್ಯ-ಚಂದ್ರರ ಲಾಂಛನಗಳಿರುವುದರಿಂದ ಈ ಚಿಹ್ನೆ ಜನಮೇಜಯರಾಯನಿಂದ ಪ್ರತಿಷ್ಠಿತವೆಂದು ಸ್ಪಷ್ಟಪಡಿಸುತ್ತದೆ. ಕಾಲಕ್ರಮದಲ್ಲಿ ನೈಸರ್ಗಿಕ ಏರುಪೇರುಗಳಿಂದಾಗಿ ಸಾವಿರಾರು ವರ್ಷಗಳವರಿಗೆ ಇದು ಭೂಗತವಾಗಿತ್ತು. ಈ ಕಾಡಿನ ಬಳಿ ಬೊಮ್ಮಯ್ಯ ಎಂಬ ಗೊಲ್ಲರವನು ತನ್ನ ಹಸುಗಳನ್ನು ಕಾಡಿನ ಬಳಿ ಮೇಯಿಸಿ, ಪುಷ್ಠಿಯಾಗಿ ಬೆಳೆಸಿ ಅವುಗಳಿಂದ ಸಾಕಷ್ಟು ಹಾಲನ್ನು ಪಡೆದು ಜೀವನ ನಡೆಸುತ್ತಿದ್ದ.

ಒಂದು ದಿನ ಒಂದು ಹೊಸ ಹಸು ಅದೇ ತಾನೇ ಜನಿಸಿದ ಕರುವಿನೊಂದಿಗೆ ಅವನ ಹಿಂಡನ್ನು ಸೇರಿತು. ಆ ರಾತ್ರಿ ಅದು ಹೇರಳವಾದ ಹಾಲನ್ನು ಕೊಟ್ಟಿತು. ಬೊಮ್ಮಯ್ಯನಿಗೆ ಬಹಳ ಸಂತೋಷವಾಯಿತು. ಮರುದಿನ ಅದು ಹಿಂಡಿನಿಂದ ತಪ್ಪಿಸಿಕೊಂಡು ಸಂಜೆ ಹಿಂತಿರುಗಿತು. ಆ ದಿನ ರಾತ್ರಿ ಹಾಲು ಕೊಡಲಿಲ್ಲ. ದೃಷ್ಟಿದೋಷವಿರಬಹುದೆಂದು ಸುಮ್ಮನಾದ. ಇತರ ಹಸುಗಳ ಜೊತೆ ಹೊರಟ ಈ ಹಸುವಿನ ರೀತಿಯೇ ಬೇರೆಯಾಗಿತ್ತು. ಅದು ನೇರವಾಗಿ ಕೆರೆ ಏರಿಯಿಂದ ಇಳಿದು ಒಂದು ಹುಲಿಯ ಪೊದೆಯ ಬಳಿ ತೆರಳಿತು. ಹಸು ಹಾಲನ್ನು ಪೊದೆಯಲ್ಲಿ ಧಾರಾಕಾರವಾಗಿ ಬಿಟ್ಟಿತು. ಇದನ್ನು ನೋಡಿದ ಬೊಮ್ಮಯ್ಯನಿಗೆ ಕೋಪ ಬಂದಿತು. ತಕ್ಷಣ ತನ್ನಲ್ಲಿದ್ದ ಕೋಲಿನಿಂದ ಹೊಡೆಯಲು ಹೋದ. ಹಸು ಮಾಯವಾಯಿತು. ಪೊದೆಯಿಂದ ಮಿಂಚಿನಂತಹ ಒಂದು ಪ್ರಕಾಶ ಹೊರಬಿದ್ದು ಅದೃಶ್ಯವಾದಂತಾಯಿತು.

ಮೂರ್ಛೆ ಹೋಗಿ ಎದ್ದ ಬೊಮ್ಮಯ್ಯನಿಗೆ ಏನೂ ಮಾಡಲು ತೋಚದೆ ಮನೆಗೆ ಹೋದ. ಅಂದು ಕನಸಿನಲ್ಲಿ ಪ್ರಾಣದೇವರು ಕಾಣಿಸಿಕೊಂಡು ''ಭಕ್ತ, ಇದರಲ್ಲಿ ನಿನ್ನದೇನೂ ತಪ್ಪಿಲ್ಲ. ನಾನು ಪ್ರಕಟವಾಗುವ ಕಾಲ ಬಂದೊದಗಿದೆ. ಆದ್ದರಿಂದ ಈ ಲೀಲೆ. ಗ್ರಾಮಸ್ಥರಿಗೆ ನನ್ನನ್ನು ಈ ಪೊದೆಯಿಂದ ಹೊರತೆಗೆದು ಸ್ಥಾಪಿಸಲು ತಿಳಿಸು'' ಎಂದು ಆಜ್ಞಾಪಿಸಿದಂತಾಯಿತು.

ಬೆಳಗ್ಗೆ ಎದ್ದು ಆ ವಿಷಯವನ್ನು ಗ್ರಾಮದ ಹಿರಿಯರಾದ ಕರಣಿಕರಿಗೆ ತಿಳಿಸಿದ. ಹುಲಿಕುಂಟೇ ಕೆರೆ ಅವರಿಗೆ ಸೇರಿತ್ತು. ಅವರೂ ದೈವಭಕ್ತರು. ಅಲ್ಲಿ ಆಂಜನೇಯಸ್ವಾಮಿ ಅಡಗಿರುವುದು ಅವರಿಗೂ ಆಶ್ಚರ್ಯವನ್ನುಂಟುಮಾಡಿತು. ಎಲ್ಲರೊಂದಿಗೆ ಸೇರಿ ಆ ಸ್ಥಳಕ್ಕೆ ಹೋದರು. ಅಲ್ಲಿ ಪೊದೆಯನ್ನು ಸರಿಸಿದಾಗ ಯಾವ ಶಿಲ್ಪಿಯ ಉಳಿ, ಸುತ್ತಿಗೆಗಳಿಗೂ ಸಿಗದ ಪ್ರಾಣದೇವರ ಪ್ರತೀಕವಿತ್ತು. ಗಂಭೀರ ಮುಖವರ್ಚಸ್ಸು, ಹನುಮದವತಾರದ ಪ್ರತೀಕವಾದ, ದುಷ್ಟಶಿಕ್ಷಣಾರ್ಥವಾಗಿ ಎತ್ತಿದ ಕೈ ಹಾಗೂ ಭೀಮಸೇನನ ಅವತಾರದ ಕುರುಹಾಗಿ ಎಡಗೈಯಲ್ಲಿ ಲಾಂಛನವಾಗಿ ಗದೆ, ಕೊರಳಲ್ಲಿ ತುಳಸೀ ಮಾಲೆ, ಕಾಲಲ್ಲಿ ಪಾದುಕೆಗಳು ಕಂಗೊಳಿಸುತ್ತಿದ್ದವು.



ಪೂಜಾದಿನಗಳ ನಂತರ ಒಂದು ಚಿಕ್ಕ ರಥದಲ್ಲಿ ಮೂರ್ತಿಯನ್ನು ಊರ ಕಡೆ ತಿರುಗಿಸಿದ್ದರು. ಆದರೆ ರಥದ ಗಾಲಿ ಮುರಿದು ವಿಗ್ರಹ ಕೆಳಗೆ ಜಾರಿತು. ಪುನಃ ರಥದಲ್ಲಿಡಲು ಎಷ್ಟು ಪ್ರಯತ್ನಿಸಿದರೂ ವಿಗ್ರಹ ಅಲುಗಾಡಲಿಲ್ಲ. ಆ ರಾತ್ರಿ ತನ್ನನ್ನು ಅಲ್ಲಿಯೇ ಸ್ಥಾಪಿಸಬೇಕೆಂದು ಕರಣಿಕರಿಗೆ ಸ್ವಪ್ನವಾಯಿತು. ಮುಂದೆ ಅಲ್ಲಿಯೇ ಚಪ್ಪರವೆದ್ದು, ಪೂಜಾದಿಗಳು ನಡೆದು ಸ್ಥಾಪನಾಕಾರ್ಯ ಸಾಂಗವಾಗಿ ನೆರವೇರಿತು.

ಅಂದಿನಿಂದಲೇ ಶ್ರೀಹುಲಿಕುಂಟೇರಾಯನ ಮಹಿಮೆ ಗೋಚರವಾಗತೊಡಗಿತು. ಒಬ್ಬ ಉಪ್ಪಾರನು ಸ್ವಾಮಿಯ ಕೃಪೆಯಿಂದ ಬಂದ ಅಧಿಕ ಲಾಭದ ಕುರುಹಾಗಿ ಗರ್ಭಗುಡಿಯನ್ನು ಕಟ್ಟಿಸಿದನು. ಕರ್ನಾಟಕ ರಾಜ್ಯ ರಮಾರಮಣ, ವಿಜಯನಗರದ ಪ್ರಭು ಶ್ರೀಕೃಷ್ಣದೇವರಾಯನಿಗೆ ಬಂದ ಕುಹಯೋಗವನ್ನು ಪರಿಹರಿಸಿ, ರತ್ನಸಿಂಹಾಸನವನ್ನೇರಿ ಅನುಗ್ರಹಿಸಿದ ಶ್ರೀವ್ಯಾಸರಾಜರು ಶಿಷ್ಯರ ಅನುಗ್ರಹಕ್ಕಾಗಿ ದಿಗ್ವಿಜಯಮಾಡುತ್ತ ಕ್ರಿ.ಶ. ೧೫೦೦ ರಲ್ಲಿ ಈ ಕ್ಷೇತ್ರಕ್ಕೆ ಆಗಮಿಸಿ, ಗ್ರಾಮದ ಕರಣಿಕರಾದ ನರಸಿಂಗರಾಯರ ಮನೆಯಲ್ಲಿ ಬಿಡಾರ ಮಾಡಿದರು. ರಾಯರು ಶ್ರೀಗಳವರಿಗೆ ಶ್ರೀಹುಲಿಕುಂಟೇರಾಯನ ವಿಷಯ ತಿಳಿಸಿದರು. ಜ್ಞಾನದೃಷ್ಟಿಯಿಂದ ಶ್ರೀಗಳವರು ಎಲ್ಲವನ್ನೂ ತಿಳಿದು ಅಂದಿನ ತಮ್ಮ ಪೂಜಾದಿಗಳು ಪ್ರಾಣದೇವರ ಸನ್ನಿಧಿಯಲ್ಲೇ ನಡೆಯಬೇಕೆಂದು ಆಜ್ಞಾಪಿಸಿದರು. ಜ್ಞಾನದೃಷ್ಟಿಯಿಂದ ಸ್ವಯಂ ಅಭಿವ್ಯಕ್ತವಾದ ಭಕ್ತಿಯಿಂದ ಪೂಜಿಸಿದರು. ಪ್ರಾಣದೇವರೊಂದಿಗೆ ತಮ್ಮ ಅಂತರ್ಗತನಾದ ವಾಯುದೇವರನ್ನು ಭಕ್ತಿಯಿಂದ ಧ್ಯಾನಿಸಿದರು. ಸ್ವತಃ ತಾವೇ ಸ್ವಾಮಿಯ ಎಡ-ಬಲಗಳಲ್ಲಿ ಶಂಖ-ಚಕ್ರಗಳನ್ನು ಶ್ರೀವಿಷ್ಣುನಿರ್ಮಾಲ್ಯ ಅಂಗಾರದಿಂದ ರಚಿಸಿ, ಅಭಿಷೇಕಮಾಡಿ ಪೂಜಿಸಿದರು. ಮೂರ್ತಿಯು ಹುಲಿಪೊದೆಯಲ್ಲಿ ಕಾಣಿಸಿಕೊಂಡಿದ್ದರಿಂದ ಇದನ್ನು ''ಹುಲಿಕುಂಟೇ ಮುಖ್ಯಪ್ರಾಣದೇವ''ರೆಂದು ನಾಮಕರಣ ಮಾಡಿದರು. ಇಲ್ಲಿ ಸೇವೆ ಮಾಡಿದವರಿಗೆ ಅವತಾರತ್ರಯರನ್ನು ಪೂಜಿಸಿದ ಪುಣ್ಯಪ್ರಾಪ್ತಿಯಾಗುವುದೆಂದೂ, ಸ್ವಯಂ ವ್ಯಕ್ತ ಪ್ರತೀಕವಾದ್ದರಿಂದ ಮಹಾಜಾಗೃತಸ್ಥಳವೆಂದೂ ಸೂಚಿಸಿ ಮುಂದಕ್ಕೆ ದಿಗ್ವಿಜಯಮಾಡಿದರು.

ಕುಂದಾಪುರ ಮಠದ ಶ್ರೀಲಕ್ಷ್ಮೀಶತೀರ್ಥರು ಬೊಮ್ಮಾಗಟ್ಟೆಯಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಾಗ, ಈ ಹುಲಿಪೊದೆಯ ಬಳಿ ಮೂಲಸ್ಥಾನದಲ್ಲಿ ಒಂದು ಮೂರ್ತಿಯನ್ನು ಸ್ಥಾಪಿಸಿದರು. ಅದನ್ನು ಇಂದಿಗೂ ಕಾಣಬಹುದು.

ಭಕ್ತಜನರ ದೇಣಿಗೆಗಳಿಂದ ಮುಂದೆ ದೇವಸ್ಥಾನದ ನಿರ್ಮಾಣಕಾರ್ಯ ಪ್ರಾರಂಭವಾಯಿತು. ಸ್ವಪ್ನದಲ್ಲಿಯ ಆದೇಶದಂತೆ ದೇವಸ್ಥಾನದ ಪೂರ್ವಕ್ಕೆ ಪುಷ್ಕರಣಿಯನ್ನು ತೋಡಿದಾಗ ಅಪಾರ ಹಣ ದೊರೆತು ಅದರಿಂದ ನಿರ್ಮಾಣಕಾರ್ಯ ಪೂರ್ಣ-

ಗೊಂಡಿತು. ಮುಮ್ಮುಡಿ ಕೃಷ್ಣರಾಜ ಒಡೆಯರ ದಿವಾನರಾಗಿದ್ದ ಪೂರ್ಣಯ್ಯನವರು ಈ ಪ್ರಾಂತದಲ್ಲಿ ಸಂಚಾರ ಕೈಗೊಂಡು ಸೇವೆಗೈದರೆಂದೂ, ದೇವಾಲಯದ ಮೇಲಿನ ದಶಾವತಾರ ವಿಗ್ರಹಗಳ ಗೋಪುರ ನಿರ್ಮಾಣಕಾರ್ಯ ಅವರ ಸೇವೆಯೆಂದೂ ತಿಳಿದುಬರುತ್ತದೆ.

ಪುಷ್ಕರಣಿಯನ್ನು ಅಗೆಯುವಾಗ ದೊರೆತ ರುದ್ರದೇವರನ್ನು ಶ್ರೀವಾದಿರಾಜರು ಅದರ ದಡದಲ್ಲಿಯೇ ಪ್ರತಿಷ್ಠಿಸಿ, ''ಗಂಗಾಧರ'' ಎಂದು ನಾಮಕರಣ ಮಾಡಿ ಪೂಜಿಸಿ, ಇದೇ ಸಂದರ್ಭದಲ್ಲಿ ಪ್ರಾಣದೇವರಿಗೆ ಸ್ವಸ್ತಿ ರಚಿಸಿ ಪೂಜೆ ಮಾಡಿದರು.

ಕ್ರಿ.ಶ. ೧೮೦೭ ರಲ್ಲಿ ಶ್ರೀಮನ್ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ಶ್ರೀಸುಬೋಧೇಂದ್ರತೀರ್ಥರಿಗೆ ದೇಹಾಲಸ್ಯವಾದಾಗ ಇಲ್ಲಿಯೇ ಶ್ರೀಸುಜನೇಂದ್ರತೀರ್ಥರಿಗೆ ಆಶ್ರಮ ಕೊಟ್ಟರು. ಆದರೆ ದೈವಾನುಗ್ರಹದಿಂದ ಅವರಿಗೆ ಗುಣವಾಗಿ ಮುಂದೆ ಇಪ್ಪತ್ತೆಂಟು ವರ್ಷಗಳ ಕಾಲ ಉಭಯರು ವೇದಾಂತಸಾಮ್ರಾಜ್ಯವನ್ನು ಪರಿಪಾಲಿಸಿದರು. ಶ್ರೀಸುಜನೇಂದ್ರತೀರ್ಥರು ನಂಜನಗೂಡು ಕ್ಷೇತ್ರದಲ್ಲಿ ಸೂರ್ಯೋಪಾಸಕರಾದ ರಾಮಾಶಾಸ್ತ್ರಿಗಳ ಗೆದ್ದ ಸಂತೋಷದ ಕುರುಹಾಗಿ ದೇವಸ್ಥಾನದಲ್ಲಿ ಶ್ರೀರಾಮ, ಲಕ್ಷ್ಮಣ, ಸೀತ, ಆಂಜನೇಯ ವಿಗ್ರಹಗಳನ್ನು ಪ್ರತಿಷ್ಠಿಸಿದರು. ಮಾಧ್ವಮಠಗಳ ಅನೇಕ ಪೀಠಾಧಿಪತಿಗಳ ಪೂಜಾದಿಗಳಿಂದ ಈ ಕ್ಷೇತ್ರವು ಪಾವನವಾಗಿದೆ.

ಈ ಸ್ವಾಮಿಯ ಭಕ್ತರನ್ನು ವಿಶೇಷವಾಗಿ ಚಿತ್ರದುರ್ಗ, ಬಳ್ಳಾರಿ ಜಿಲ್ಲೆ, ಆಂಧ್ರದ ಅನಂತಪುರ ಜಿಲ್ಲೆಗಳಲ್ಲಿ ಕಾಣಬಹುದು. ಈ ಕ್ಷೇತ್ರದಲ್ಲಿ ಮಾಧ್ವರ ಸಂಖ್ಯೆ ಸ್ವಲ್ಪ ಪ್ರಮಾಣದಲ್ಲಿದ್ದು, ಅವರೆಲ್ಲರೂ ರಾಯರ ಮಠದ ಶಿಷ್ಯರಾಗಿರುವುದು ವಿಶೇಷ.

❑❑

### ಹೊಸರಿತ್ತಿಯಲ್ಲಿ ೨೨೨ ಜನರಿಗೆ ಸನ್ಮಾನ

ಶ್ರೀಧೀರೇಂದ್ರತೀರ್ಥರ ೨೨೨ ನೇ ಆರಾಧನಾ ಮಹೋತ್ಸವದ ಸಂಸ್ಮರಣಾರ್ಥ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ೨೨೨ ಜನರಿಗೆ ದಿನಾಂಕ ೦೧-೦೩-೨೦೦೭ ರಂದು ಉಭಯ ಶ್ರೀಪಾದಂಗಳವರು ಸನ್ಮಾನಿತರಿಗೆ ಶಾಲು ಹೊದಿಸಿ, ಸ್ಮರಣಿಕೆಯನ್ನಿತ್ತು, ಸಂಭಾವನೆಯೊಂದಿಗೆ 'ಧೀರಶ್ರೀ' ಪ್ರಶಸ್ತಿಯನ್ನಿತ್ತು ಗೌರವಿಸಿದರು. ಹಾವೇರಿ ಜಿಲ್ಲೆಯ ವಿದ್ವಾಂಸರು, ವೇದ ಪಂಡಿತರು, ಸರ್ಕಾರಿ ಶಾಲಾ ಶಿಕ್ಷಕರು, ಶುಶ್ರೂಷಕಿಯರು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು, ಪೋಲೀಸ್ ಅಧಿಕಾರಿಗಳು, ಉದ್ಯಮಿಗಳು, ಸ್ವಾತಂತ್ರ್ಯ ಹೋರಾಟಗಾರರು, ಮುಂತಾದವರು ಪ್ರಶಸ್ತಿಗೆ ಭಾಜನರಾದರು.





# ತಮಿಳುನಾಡಿನ ನವಗ್ರಹ ದೇವಾಲಯಗಳು – ೪

■ ಸಂಗ್ರಹ : **ಸೂರೀಂದ್ರ**
ಬೆಂಗಳೂರು

ಗ್ರಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಆದರೆ ಅದರ ಪ್ರಭಾವ ಕುಂಡಲಿಯಲ್ಲಿನ ಜಾಗದ ಮೇಲೆ ಕೊನೆಗೊಳ್ಳುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ತಮಿಳುನಾಡಿನ ನವಗ್ರಹ ದೇವಸ್ಥಾನಗಳು ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳನ್ನು, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ - ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448**.

## 4. ರಾಹು

ಕುಂಭಕೋಣದಿಂದ ಪೂರ್ವಕ್ಕೆ ೬೨ ಕಿ.ಮೀ. ಕ್ರಮಿಸಿದರೆ ನಮಗೆ ಕಾಣಸಿಗುವ ಊರು ''ತಿರುನಾಗೇಶ್ವರ''. ಇದನ್ನು ''ತಿರುನಾಗಸ್ವರ''ವೆಂತಲೂ ಕರೆಯುವ ವಾಡಿಕೆಯುಂಟು. ಇಲ್ಲಿ ಒಂದು ಸುಂದರವಾದ ಅಮ್ಮನವರ ದೇವಸ್ಥಾನವಿದ್ದು, ಇದನ್ನು

ಸ್ಥಳೀಯರು ''ಅಮ್ಮನ್ ಕೋಯಿಲ್'' ಎಂದು ಕರೆಯುವುದು ವಾಡಿಕೆ. ''ನೆಕ್ಕಹುಲಾರ್'' ಎನ್ನುವ ಸ್ವಾಮಿಗಳೊಬ್ಬರು ಈ ಸ್ಥಳದಲ್ಲಿನ ಹೂವಿನ ತೋಟವನ್ನು ನೋಡಿಕೊಳ್ಳು-ತ್ತಿದ್ದರು. ಈಗ ಆ ಸ್ಥಳದಲ್ಲಿಯೇ ರಾಹುವಿನ ಸನ್ನಿಧಾನವಿದೆ. ಈ ಸ್ಥಳದಲ್ಲಿ ರಾಹು ನೆಲೆಸಿರುವ ಕಲ್ಲೊಂದನ್ನು ನಾವು ಕಾಣಬಹುದು. ಆ ಕಲ್ಲಿಗೆ ಕ್ಷೀರಾಭಿಷೇಕ ಮಾಡಿದಾಗ ಆ ಕಲ್ಲು ನೀಲಿಬಣ್ಣಕ್ಕೆ ತಿರುಗುವುದನ್ನು ಇಂದಿಗೂ ಕೂಡಾ ನಾವು ನೋಡಬಹುದಾಗಿದೆ.

ತಿರುನಾಗೇಶ್ವರ ದೇವಾಲಯದ ಪ್ರವೇಶದ್ವಾರವನ್ನು ಹೊಕ್ಕಿ ಒಳನಡೆದರೆ ಕಮಾನಿನಲ್ಲಿ ನಾಗನಾಥಸ್ವಾಮಿ ವಿಗ್ರಹವನ್ನು ವೀಕ್ಷಿಸಬಹುದು. ಗೋಪುರದಿಂದ ಒಳನಡೆದಾಗ ಉದ್ದಕ್ಕೂ ಅನೇಕ ಹೂವಿನ ಅಂಗಡಿಗಳು, ದೇವರ ಪೂಜಾಸಾಮಗ್ರಿಗಳ ಅಂಗಡಿಗಳು, ಕಲ್ಯಾಣಮಂಟಪಗಳು ದಾರಿಯುದ್ದಕ್ಕೂ ಸಿಗುತ್ತವೆ. ಇವುಗಳನ್ನು ದಾಟಿ ನಡೆದರೆ ನಮಗೆ ಗೋಚರವಾಗುವುದೇ ಪ್ರಸನ್ನ, ನಂದಿ ಮತ್ತು ಗಣಪತಿ. ಇವುಗಳ ಎಡಭಾಗದಲ್ಲಿ ಸೂರ್ಯತೀರ್ಥದ ಕೊಳವನ್ನು ಕೂಡಾ ಕಾಣಬಹುದು. ನಂತರದಲ್ಲಿ ದೊಡ್ಡ ಹಜಾರವೊಂದಿದ್ದು, ಈ ಹಜಾರವು ನೂರು ಕಂಬಗಳಿಂದ ಆವೃತ್ತವಾಗಿದೆ. ವಿವೇಕಕ್ಕೆ ಅಧಿಪತಿಯಾದ ಈ ಸ್ವಾಮಿಗೆ ಭಕ್ತರು ಹಾಲು, ಬೆಳ್ಳಿಯ ನಾಗರಗಳನ್ನು ಅರ್ಪಿಸುವುದು ಇಲ್ಲಿಯ ವಾಡಿಕೆ.

ರಾಹು ಮತ್ತು ಕೇತು ಗ್ರಹಗಳು ೧೮೦ ಡಿಗ್ರಿ ವಾಲಿರುತ್ತವೆ ಮತ್ತು ನವಗ್ರಹಗಳ ಸಂಚಲನದಲ್ಲಿ ಅಪ್ರದಕ್ಷಿಣಾಕಾರವಾಗಿ ಈ ಎರಡು ಗ್ರಹಗಳು ಸುತ್ತುತ್ತಿರುತ್ತವೆ. ಈ ಎರಡೂ ಗ್ರಹಗಳು ಗ್ರಹಗಳ ನೆರಳಿನಂತಾದರೂ ಮಾನವರ ಮೇಲೆ ಒಳ್ಳೆಯ ಪ್ರಭಾವಗಳನ್ನು ಬೀರುತ್ತವೆ. ರಾಹುವು ತನ್ನ ವಾಹನವಾದ ಆಡಿನ ಮೇಲೆ ಸವಾರಿ ಮಾಡುತ್ತಾನೆ ಮತ್ತು ದಕ್ಷಿಣ - ಪಶ್ಚಿಮ ದಿಕ್ಕಿಗೆ ತಿರುಗಿರುತ್ತಾನೆ. ರಾಹುವಿಗೆ ಮಂದಾರ ಹೂ ಮತ್ತು ಉದ್ದು ಇವುಗಳು ಪ್ರೀತಿ. ಆಕಾರವು ಕಪ್ಪು (ಹಾವಿನ ಹಾಗೆ). ರಾಹುವಿನ ಅವಧಿ ಎಂಟು ವರ್ಷ. ರಾಹುವು ಬಾಹುಬಲಕ್ಕೆ, ರೋಗನಿವಾರಣೆಗೆ ದೊರೆ. ಈ ಗ್ರಹದ ಶಾಂತಿಗಾಗಿ ಗೋಮೇದಕ ಹರಳನ್ನು ಧರಿಸಬೇಕು. ಬೆಳ್ಳಿಯ ಹಾವನ್ನು ದಾನಮಾಡಬೇಕು. ಉದ್ದಿನ ಬೇಳೆಯನ್ನು ದಾನಮಾಡುವುದರಿಂದ ಶಾಂತಿ-ಯುಂಟಾಗಿ, ಶತ್ರುಗಳು ನಾಶವಾಗುತ್ತಾರೆ.

**(ಮುಂದುವರೆಯುವುದು)**

**ಉಂಗುರದಲ್ಲಿ ನವಗ್ರಹಗಳ ಕ್ರಮ**

| | | |
|---|---|---|
| ಬುಧ<br>ಮರಗೋದಮ್ | ಶುಕ್ರ<br>ವಜ್ರ | ಚಂದ್ರ<br>ಮುತ್ತು |
| ಗುರು<br>ಪುಷ್ಯರಾಗ | ಸೂರ್ಯ<br>ಮಾಣಿಕ್ಯ | ಮಂಗಳ<br>ಹವಳ |
| ಕೇತು<br>ವೈಢೂರ್ಯ | ಶನಿ<br>ನೀಲಿವಜ್ರ | ರಾಹು<br>ಗೋಮೇದಕ |



## ವಿತರಣಾ ವಿಭಾಗದ ವಿವರಣೆ

ಮಾನ್ಯ ಸದಸ್ಯರೇ,

ತಮ್ಮೆಲ್ಲರಿಗೂ ಪತ್ರಿಕೆಯನ್ನು ಸಕ್ರಮವಾಗಿ ವಿತರಿಸಲು ಮಂತ್ರಾಲಯದಲ್ಲಿ ಪ್ರತ್ಯೇಕವಾಗಿಯೇ ವಿತರಣಾ ವಿಭಾಗ, ಸಂಬಂಧಪಟ್ಟ ಸಿಬ್ಬಂದಿಗಳಿರುವುದು ತಮಗೆ ತಿಳಿದದ್ದೇ ಆಗಿದೆ. ಇವರು ಪ್ರತಿಯೊಬ್ಬ ಸದಸ್ಯರ ವಿಳಾಸ ಹಾಗೂ ಎಲ್.ಎಂ. ನಂಬರುಗಳನ್ನು ಒಟ್ಟು ನಾಲ್ಕು ಬಾರಿ ತಪಾಸಣೆ ಮಾಡುತ್ತಾರೆ. ನಂತರ ಅಂಚೆ ಕಛೇರಿಗೆ ಅವೆಲ್ಲಾ ಪತ್ರಿಕೆಗಳು (ಸುಮಾರು ಹನ್ನೆರಡು ಸಾವಿರ ಪತ್ರಿಕೆಗಳು) ಸಕ್ರಮವಾಗಿ ತಲುಪುವಂತೆ ನೋಡಿಕೊಳ್ಳುತ್ತಾರೆ. **ಇಲ್ಲಿಗೆ ವಿತರಣಾ ವಿಭಾಗದ ಜವಾಬ್ದಾರಿಯುತ ಕರ್ತವ್ಯವು ಮುಗಿಯುತ್ತದೆ.** ಇಲ್ಲಿಂದ ಪತ್ರಿಕೆಯು ತಮ್ಮ ಮನೆಗೆ ತಲುಪಲು ಅಂಚೆ ವಿಭಾಗದವರ ಕರ್ತವ್ಯ ಪ್ರಮುಖವಾಗುತ್ತದೆ. ನೂರಾರು ಕಿ.ಮೀ. ಕ್ರಮಿಸುವಾಗ ಪತ್ರಿಕೆಗಳು ಎಲ್ಲಿ ಬೇಕಾದರೂ ಕಳೆದುಹೋಗುವ ಅವಕಾಶ ಇರುತ್ತದೆ. ಒಂದು ವೇಳೆ ಈ ಕಾರಣದಿಂದ ತಮಗೆ ಪತ್ರಿಕೆ ಬಾರದಿದ್ದರೂ ತಾವು ವಿತರಣಾ ವಿಭಾಗದವರನ್ನೇ ಪ್ರಶ್ನಿಸುತ್ತೀರಿ. ಆದರೆ ಅವರು ಸಕ್ರಮವಾಗಿ ಕಳುಹಿಸಿ ನಿಮ್ಮ ಎಲ್.ಎಂ. ನಂಬರಿಗೆ ಆದ ಸ್ಟ್ಯಾಂಪ್ ಖರ್ಚಿನ ವಿವರವನ್ನು ಕಛೇರಿಯ ಕಡತದಲ್ಲಿ ನಮೂದಿಸಿ, ಆ ತಿಂಗಳ ಖರ್ಚಿನ ವ್ಯವಹಾರ ಮುಗಿಸಿ, ಫೈಲನ್ನು ಮ್ಯಾನೇಜರ್‌ರವರಿಗೆ ಕಳುಹಿಸಿದರೆಂದರೆ ಕರ್ತವ್ಯ ಮುಗಿಯಿತು. ಇದನ್ನು ಯಾರು ಬೇಕಾದರೂ ಬಂದು ತನಿಖೆ ಮಾಡಬಹುದು. ಆದರೆ ತಾವು ಪತ್ರಿಕೆ ತಲುಪದ ಕಾರಣ, ಮತ್ತೆ ಪತ್ರಿಕೆ ಕಳುಹಿಸಲು ಕೋರಿದರೆ ಕಳುಹಿಸಲು ಅವರು ಅಸಹಾಯಕರಾಗಿರುತ್ತಾರೆ. ಏಕೆಂದರೆ, ನಿಮ್ಮ ಹೆಸರಿನಲ್ಲಿ ಮತ್ತೊಮ್ಮೆ ಸ್ಟ್ಯಾಂಪ್ ಖರ್ಚು ಹಾಕಲು ಬರುವುದಿಲ್ಲ ಮತ್ತು ಸೀಮಿತ ಪ್ರಮಾಣದಲ್ಲಿ ಪತ್ರಿಕೆ ಪ್ರಿಂಟ್ ಆಗು-ವುದರಿಂದ ಹೆಚ್ಚಿನ ಪ್ರತಿಗಳು ಇರುವುದಿಲ್ಲ. ಈ ರೀತಿ ಪ್ರತಿ ತಿಂಗಳು ಸುಮಾರು ಜನರಿಗೆ ಹೀಗೆ ಆಗುತ್ತದೆ (ಇತರೇ ಪತ್ರಿಕೆಗಳಲ್ಲೂ ಹೀಗಾಗುತ್ತಲಿದೆ). ಒಬ್ಬ ಸದಸ್ಯರಿಗೆ ನಾಲ್ಕು ವರ್ಷಗಳಿಂದ ಪತ್ರಿಕೆ ಬಾರದಿರಲು ಅವರು ಬಂದು ಪರಿಶೀಲಿಸಿದಾಗ ವಿಳಾಸಗಳೆಲ್ಲವೂ ಸರಿಯಾಗಿಯೇ ಇದ್ದುದು ಕಂಡುಬಂದಿದೆ (ಇಲ್ಲಿ ಕಾರ್ಯಾಲಯದ ತಪ್ಪು ಇಲ್ಲವೆಂದು ತಿಳಿದುಕೊಂಡರು). ಹೀಗಾಗಿ ನಮ್ಮ ಕಾರ್ಯಾಲಯದಿಂದ ಅಂಚೆ ಕಛೇರಿಗೆ ಪತ್ರಿಕೆ ತಲುಪಿದ ನಂತರ ತಮಗೆ ತಲುಪದಿದ್ದಲ್ಲಿ **ಮಧ್ಯದಲ್ಲಿ ಎಲ್ಲಿಯೋ ಆದ ತಪ್ಪುಗಳಿಗೆ ವಿತರಣಾ ವಿಭಾಗವು ಹೇಗೆ ಬಾಧ್ಯವಾಗುತ್ತದೆ?** ಆದ್ದರಿಂದ ಸದಸ್ಯರು ಮಂತ್ರಾಲಯಕ್ಕೆ ಬಂದಾಗ ದಯವಿಟ್ಟು ಒಮ್ಮೆ ವಿತರಣಾ ವಿಭಾಗವನ್ನು ಸಂದರ್ಶಿಸಿರಿ ಹಾಗೂ ತಮಗೆ ಪತ್ರಿಕೆಗಳು ಯಾವ ವಿಧಾನದಲ್ಲಿ, ಯಾವ ದಿನಾಂಕದಂದು ಪೋಸ್ಟ್ ಆಯಿತೆಂಬ ಮಾಹಿತಿಯನ್ನು ಸ್ಪಷ್ಟವಾಗಿ ಪಡೆಯಿರಿ. **ಇಲ್ಲಿ ಏನಾದರೂ ತಪ್ಪಿದ್ದಲ್ಲಿ ಮಾತ್ರವೇ ವಿತರಣಾ ವಿಭಾಗದವರ ಜವಾಬ್ದಾರಿಯಿರುತ್ತದೆ. ಆಗ ಅವಶ್ಯಕವಾಗಿ ಮ್ಯಾನೇಜರ್‌ರವರಿಗೆ ದೂರು ಸಲ್ಲಿಸಬಹುದು.** ಇದೊಂದು ಅಚ್ಚುಕಟ್ಟಾದ ವ್ಯವಸ್ಥೆಯ ಚೌಕಟ್ಟಿನಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಪತ್ರಿಕೆ. ಆದ್ದರಿಂದ **ತಮಗೆ ಪತ್ರಿಕೆ ತಲುಪಲಿಲ್ಲವೆಂದ ಮಾತ್ರಕ್ಕೆ ನೇರವಾಗಿ ವಿತರಣಾ ವಿಭಾಗವೇ ಕಾರಣವೆಂದು ಭಾವಿಸಬಾರದಾಗಿ,** ದಯವಿಟ್ಟು ಸಹಕರಿಸಬೇಕಾಗಿ ಕೋರುತ್ತೇವೆ.

# ಶ್ರೀಹರಿದಾಸಸಾಹಿತ್ಯದ ಮೂಲ

■ ವಾದಿರಾಜ ದೇಶಪಾಂಡೆ
ಜಮಖಂಡಿ

ಹಿಂದಿನ ಸಂಚಿಕೆಯಿಂದ.......

**ಈ** ಎಲ್ಲ ಮಾತುಗಳು ವೇದಗಳಲ್ಲಿ ಹೇಳಲಾಗಿದೆ. ವೇದಗಳನ್ನು ತಿಳಿಯದವರಿಗೆ ಮಹಾಭಾರತ, ರಾಮಾಯಣ, ಹದಿನೆಂಟು ಪುರಾಣಗಳನ್ನು ಒದಗಿಸಿಕೊಟ್ಟನು. ಪ್ರಾರಂಭದಲ್ಲಿ ಹೇಳಿದಂತೆ ಕಲಿಕಾಲದಲ್ಲಿ ಜ್ಞಾನ ಹಾಗೂ ಧರ್ಮಗಳ ಮಟ್ಟ ಕಡಿಮೆ ಇರುವುದರಿಂದ ಜನರ ತಿಳುವಳಿಕೆ ಹಾಗೂ ಶಕ್ತಿಗಳು ಕಡಿಮೆಯಾದವು. ಆದರೂ ಸಹ ಹುಟ್ಟಿದ ಜೀವರಾಶಿಯು ಉದ್ಧಾರವಾಗಲೇಬೇಕು. ಅವರಿಗೆ ಜ್ಞಾನವಾಗಲೇಬೇಕು. ಈ ಕಾರಣದಿಂದ ಜನರ ಆಡುಭಾಷೆಯಲ್ಲಿ ವೇದ, ಪುರಾಣಗಳಲ್ಲಿಯ ವಿಷಯಗಳನ್ನು ಸಾಮಾನ್ಯ ಜನರವರೆಗೆ ತಲುಪಿಸುವುದು ಈ ಕಾಲದಲ್ಲಿ ಅವಶ್ಯ ಕರ್ತವ್ಯವಾಯಿತು. ಇದಕ್ಕೆ ಉತ್ತರವೋ ಎಂಬಂತೆ ಮಠಾಧಿಪತಿಗಳು, ಅವರ ಶಿಷ್ಯರಾದ ದಾಸರು ಹಾಗೂ ಅವರ ಪರಂಪರೆಯಲ್ಲಿ ಸಂಗೀತ ಹಾಗೂ ಪದ್ಯಗಳ ಮುಖಾಂತರ ತತ್ತ್ವಪ್ರಚಾರ ಮಾಡಿದರು. ಈ ಕಾರ್ಯವನ್ನು ಯತಿಗಳಾದ ಶ್ರೀನರಹರಿತೀರ್ಥರು, ಶ್ರೀಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು ಹಾಗೂ ಅವರ ಶಿಷ್ಯರಾದ ಶ್ರೀಪುರಂದರದಾಸರು, ಶ್ರೀವಿಜಯದಾಸರು, ಶ್ರೀಕನಕದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರೇ ಮೊದಲಾದವರು ಬಹಳ ಪ್ರೇಮದಿಂದ, ಕಷ್ಟಸಹಿಷ್ಣುತೆಯಿಂದ ಪರಮಾತ್ಮನು ಪ್ರೀತಿಯಾಗುವ ರೀತಿಯಲ್ಲಿ ಜನರಿಗೆ ತಿಳಿಯುವಂತೆ ಅತ್ಯಂತ ಯಶಸ್ವಿಯಾಗಿ ಮಾಡಿಕೊಟ್ಟರು.

ಶ್ರೀಮಧ್ವಸಾಹಿತ್ಯವನ್ನು (ವೇದಸಾಹಿತ್ಯವು) ವಿವರಿಸುವಂತೆ ದೇವತೆಗಳ ತಾರತಮ್ಯವು ಮೂವತ್ತೆರಡು ಕಕ್ಷೆಗಳಲ್ಲಿ ಕ್ರಮವಾಗಿ ಜೋಡಿಸಿ ವಿವರಿಸಲಾಗಿದೆ. ಮೇಲ್ಭಾಗದಲ್ಲಿ ಬರುವವರು ಉನ್ನತ ಯೋಗ್ಯತೆಯವರಿದ್ದು, ಕೆಳಗಿನವರು ಅವರಿಗಿಂತ ಕಡಿಮೆ ಯೋಗ್ಯತೆಯವರಿದ್ದಾರೆ. ಮೂವತ್ತೆರಡರ ಮಧ್ಯ ಅಂದರೆ, ಹದಿನಾರನೇ ಕಕ್ಷೆ ಬರುತ್ತದೆ. ಹದಿನಾರನೇ ಕಕ್ಷೆಯಲ್ಲಿ ಸಪ್ತರ್ಷಿಗಳು ಹಾಗೂ ವಿಶ್ವಾಮಿತ್ರರು ಬರುತ್ತಾರೆ. ಈ ಕಕ್ಷೆಯು ಒಂದನೇ, ಎರಡನೇ ಕಕ್ಷೆಗಿಂತ ಮನುಷ್ಯೋತ್ತಮರಿಗೆ (ಮೂವತ್ತೆರಡು) ಹೆಚ್ಚು ಸಮೀಪವಾಗಿದೆ. ಋಷಿಗಳ ಉಪದೇಶವು ಮನುಷ್ಯರಿಗೆ ಬೇಗನೆ ಅರ್ಥವಾಗುತ್ತದೆ. ಹದಿನಾರು, ಹದಿನೇಳನೇ ಕಕ್ಷೆಯವರಿಗೆ ಚಾಲನೆ ಬೇಕಾದಾಗ ಹದಿನಾಲ್ಕು, ಹದಿನೈದನೇ ಕಕ್ಷೆಯವರೇ ಮಾರ್ಗದರ್ಶಕರಾಗಬೇಕಾಗುತ್ತದೆ. ಹದಿನಾಲ್ಕನೇ ಕಕ್ಷೆಯವರೆಂದರೆ ದೇವರ್ಷಿ ನಾರದರಾಗಿದ್ದಾರೆ. ಹದನೈದನೇ ಕಕ್ಷೆಯವರೆಂದರೆ ಋಷಿ ಶ್ರೇಷ್ಠ ಭೃಗುಮುನಿಗಳಾಗಿದ್ದಾರೆ. ಈ ಕಾರಣದಿಂದಲೇ ಭರತಖಂಡಕ್ಕೆ ಪೂಜ್ಯರಾದ (ಮಾರ್ಗದರ್ಶಕ ಗುರು) ಶ್ರೀಮನ್ ನಾರದರೇ ಪುರಂದರದಾಸರಾಗಿ ಶ್ರೀಹರಿವಾಯುಗಳು ಆಜ್ಞೆಯಂತೆ ಅವತಾರಮಾಡಿದರು. ಅವರ ತರುವಾಯ ಶ್ರೀವಿಜಯದಾಸರಾಗಿ ಶ್ರೀಭೃಗುಮುನಿಗಳು ಅವತಾರಮಾಡಿದರು.

ಶ್ರೀಪುರಂದರದಾಸರು ದಾಸಶ್ರೇಷ್ಠರೆಂದು ಕೀರ್ತಿಭಾಜನರಾಗಿದ್ದಲ್ಲದೆ, ದಾಸಪಿತಾಮಹ ಮುಂತಾದ ಬಿರುದುಗಳನ್ನು ಆಗಿನ ಜನರು ಒಳ್ಳೆಯ ಅಂತಃಕರಣದಿಂದ ಕೊಡಮಾಡಿದರು. ಇವರ ಗುರುಗಳಾದ ಶ್ರೀವ್ಯಾಸರಾಜರೇ ಇವರನ್ನು ''ದಾಸರೆಂದರೆ ಪುರಂದರದಾಸರಯ್ಯ, ಪೂತಾತ್ಮ ಶ್ರೀವಾಸುದೇವಕೃಷ್ಣನ್ನು ಸೂಸಿ ಪೂಜಿಸುವಂಥ ದಾಸರು ಇವರಯ್ಯ'' ಎಂದು ಮುಕ್ತಕಂಠದಿಂದ ಪ್ರಶಂಸೆಗೈದಿದ್ದಾರೆ. ಶ್ರೀಪುರಂದರದಾಸರು ನಡೆಸಿದಂತಹಾ ದಾಸಜೀವನವು ಮುಂದೆ ಬರುವ ಇಡೀ ದಾಸಪರಂಪರೆಗೆ ಶ್ರೇಷ್ಠವಾದ ಮಾರ್ಗದರ್ಶಿಯಾಯಿತು. ಶ್ರೀಪುರಂದರದಾಸರು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಪದ-ಪದ್ಯಗಳನ್ನು ಮಾಡಿದ್ದಾರೆಂದು ಸೂಚಿಸುವ ಸೂಚಿಸುವ ಲಿಖಿತ ಉಲ್ಲೇಖಗಳು ಇಂದಿಗೂ ದೊರೆಯುತ್ತವೆ. ಆದರೆ ನಾಡಿನ ದೌರ್ಭಾಗ್ಯದಿಂದಾಗಿ ಇಂದಿಗೆ ಅವೆಲ್ಲವೂ ದೊರೆಯುತ್ತಿಲ್ಲ, ದೊರೆತಂಥಹಾ ಹಲವೇ ಪದ್ಯಗಳನ್ನು ಭಕ್ತಿಯಿಂದ ಓದಿದಾಗ, ಅವುಗಳಲ್ಲಿ ಭಗವಂತನ ಮಹಾತ್ಮೆ - ವೈಭವ, ಅವನ ಸರ್ವಜ್ಞತ್ವ, ಅವನ ಪೂರ್ಣ ಬಲ, ಪೂರ್ಣ ಶಕ್ತಿ ಮತ್ತು ದಿಗಂತ ಕೀರ್ತಿಗಳೇ ಮೊದಲಾದವುಗಳಿರುವ ಚಿತ್ರ ಸ್ಪಷ್ಟವಾಗಿ ಮೂಡಿಬಂದಿದೆ. ಅದರಂತೆ ಕಲಿಕಾಲದ ಸಮಾಜವು ಅಜ್ಞಾನದಿಂದ ಮಾಡುವ ತಪ್ಪುಗಳನ್ನು ವಿಡಂಬನಾ ರೂಪವಾಗಿಯೂ, ಹಲವು ಕಡೆ ನೇರವಾಗಿಯೂ ತಿವಿದು ತಿಳಿಸಿದ್ದಾರೆ. ಜನಸಾಮಾನ್ಯರು ದುಃಖದಿಂದ ಬಿಡುಗಡೆ ಹೊಂದಿ ಆನಂದದ ಸನ್ಮಾರ್ಗವು ಹಿಡಿಯಲಿ ಎಂಬ ಸಾಮಾಜಿಕ ಕಳಕಳಿಯಿಂದಾಗಿ ಅನೇಕ ಹಾಡುಗಳನ್ನು ರಚಿಸುವಾಗ ಕಣ್ಣಿಗೆ ಕಾಣುವ ಸಾಮಾನ್ಯ ವಸ್ತುಗಳನ್ನು ಹಾಗೂ ಘಟನೆಗಳನ್ನು ತೋರಿಸಿ, ಅವುಗಳ ಮೇಲೆ ಪದ್ಯ ರಚಿಸಿ, ಆಧ್ಯಾತ್ಮಿಕ ಅರ್ಥಗಳು ಸಾಮಾನ್ಯರಿಗೆ ಬೇಗನೆ ತಿಳಿಯುವಂತೆ ವಿವರಣೆ ಕೊಟ್ಟಿದ್ದಾರೆ. ಸಮಾಜವನ್ನು ತಿದ್ದುವ ದಾಸರ ರೀತಿಯೂ ಬಹು ಆಶ್ಚರ್ಯಕರವೂ ಹಾಗೂ ಆಕರ್ಷಣೀಯವೂ ಆಗಿದ್ದಿತು. ಅವರು ಉಪದೇಶಗಳನ್ನು ಕವನರೂಪದಲ್ಲಿ ಮಾಡಿದ್ದರಿಂದ ನೆನಪು ಇಡುವುದಕ್ಕಾಗಿ ಬಹಳ ಸುಲಭವಾಯಿತು. ಆದ್ದರಿಂದಲೇ ಅಕ್ಷರ ಪರಿಜ್ಞಾನ ಇಲ್ಲದಂಥ ಸಾಮಾನ್ಯ

ಹಳ್ಳಿಗರು ಹಾಗೂ ಹೆಣ್ಣುಮಕ್ಕಳು, ನೂರಾರು ವರ್ಷಗಳಿಂದ ಅವೇ ಪದ್ಯಗಳನ್ನು ತಲೆತಲಾಂತರದಿಂದ ಸ್ಮರಣೆಯಲ್ಲಿಟ್ಟು, ಆನಂದದಿಂದ, ಭಕ್ತಿಯಿಂದ ಹಾಡಿಕೊಂಡು ಬಂದಿದ್ದಾರೆ. ಇವೆಲ್ಲವುಗಳಿಂದ ಇಂದು ನಮಗೆ ತಿಳಿದುಬರುವುದೇನೆಂದರೆ, ದಾಸರು ಜನರ ಮೇಲೆ ಎಷ್ಟು ಕರುಣೆ ಮಾಡಿದ್ದಾರೆ ಹಾಗೂ ಅನುಗ್ರಹ ಮಾಡಿದ್ದಾರೆ ಮತ್ತು ಅವರನ್ನು ಸಾಂಸಾರಿಕ ಕೋಟಲೆಗಳಿಂದ ಬಿಡಿಸಿ ಆಧ್ಯಾತ್ಮದ ದಾರಿಯನ್ನು ತೋರಿಸಿ ಮುಕ್ತಿಮಾರ್ಗಕ್ಕೆ ಕೊಂಡು ಒಯ್ದಿದ್ದಾರೆ. ಮುಂದಿನ ಪುಟಗಳಲ್ಲಿ ಶ್ರೀದಾಸರ ಜೀವನ-ವನ್ನು ನೋಡಿದಾಗ ನಮಗೆ ಈ ಮಾತಿನ ಪೂರ್ಣ ದಿಗ್ದರ್ಶನವೂ ಆಗುತ್ತದೆ.

**(ಮುಗಿದುದು)**




## ‘SMS’ ಸ್ಪಂದನ.... ಸ್ಪಂದನ.... ಸ್ಪಂದನ....

ನಿಮ್ಮ ಅಭಿಪ್ರಾಯಗಳನ್ನು **SMS** ಮೂಲಕ ನಮಗೆ ತಿಳಿಸಬಹುದೆಂದು ನಾವು ಕರೆಯಿತ್ತಾಗ ಅದಕ್ಕೆ ಸ್ಪಂದಿಸಿದ ಸದಸ್ಯರುಗಳ **SMS** ಗಳನ್ನು ಇಲ್ಲಿ ಅನಾವರಣಗೊಳಿಸುತ್ತಿದ್ದೇವೆ. ನಿಮ್ಮಿಂದ ಇನ್ನೂ ಹೆಚ್ಚಿನ ಸ್ಪಂದನವನ್ನು ಪತ್ರಿಕೆಯು ನಿರೀಕ್ಷಿಸುತ್ತದೆ.

1. **Sir. Pushya-07 come out nicely, good articles giving best knowledge.**

   **N.G. Joshi,** *Advocate, Dharwad.*

   L.M. No. 6384 — Mobile No. : 9243283104

   Dt. 27-01-2007 — Time : 05 : 17 p.m. ***(the Day of Madhwanavami)***

2. **My joy new no boundaries when I read about Shri Bhogapuresha at N'Bhogapur. He is our family devine, we all bow to him with humbleness.**

   **Dr. Shrinivas** — Mobile No. : 9448232791,

   Dt. 30-01-2007 — Time : 02 : 04 p.m.

3. **Taking helpless private Raghavendra Matha is good idea. Thank You.**

   Mobile No. : 9448408190, Dt. 09-02-2007 — Time : 09 : 26 p.m.

4. **Please Publish articles which increases bhakti and vairagya.**

   Mobile No. : 9449380887, Dt. 22-02-2007 — Time : 08 : 40 p.m.

5. **E salada Vijaya Sampada da Aparupada Chitrada sahita namma Gurusarvabhouma lekhanamale Ekadashi Mahathme manasige thumba hidisithu. Hats of to you.**

   Mobile No. : 9945327276, Dt. 26-02-2007 — Time : 11 : 04 p.m.

**(ಇನ್ನಷ್ಟು SMS ಗಳು ಮುಂದಿನ ಸಂಚಿಕೆಯಲ್ಲಿ)**



## ಮಾಸಪತ್ರಿಕೆ ನವಕರೀಸಿರುವ ಸದಸ್ಯರ ಹೆಸರು ಮತ್ತು ಎಲ್.ಎಂ. ನಂಬರುಗಳು

| | | |
|---|---|---|
| 1656 | ಎಂ.ಪಿ. ದೇಶಪಾಂಡೆ | ಬೀಳಗಿ |
| 652 | ಎಸ್. ವೀರಮ್ಮ ಮಿಸ್ಟ್ರಸ್ | ಸರೋಬ್ |
| 1079 | ಕೆ.ಎಸ್. ರಾಘವೇಂದ್ರ | ಬೆಂಗಳೂರು |
| 38 | ಟಿ. ಸತ್ಯನಾರಾಯಣ | ಬೆಂಗಳೂರು |
| 384 | ಕೆ. ಸುಬ್ಬರಾಯ ಬೈಯಪ್ಪಾಡಿತ್ತಾಯ | ಪುತ್ತೂರು |
| 942 | ಹಳೇಕೋಟೆ. ಎನ್. ರಮೇಶ್ | ಮೂಡಿಗೆರೆ |
| 731 | ಎಸ್.ಎಸ್. ರಾಯ್ಕರ್ | ಶಿರಸಿ |
| 639 | ವಿ. ಶೇಷಗಿರಿ | ಬೆಂಗಳೂರು |
| 82 | ಸಿ. ನಾರಾಯಣರಾವ್ | ಬೆಂಗಳೂರು |
| 1539 | ಎ.ಪಿ. ಕುಲಕರ್ಣಿ | ವಲ್ಸಾದ್ |
| 787 | ಬಿ.ಆರ್. ರಂಗನಾಥ | ಭದ್ರಾವತಿ |
| 770 | ದೇವೇಂದ್ರ ಕೃಷ್ಣಮೂರ್ತಿ ಆಚಾರ್ | ಹೊಸಪೇಟೆ |
| 618 | ದೇವೇಂದ್ರ. ಜೆ. ದೇಸಾಯಿ ಕೇಸರಿ | ಹೈದರಾಬಾದ್ |
| 1182 | ಬಿ.ಆರ್. ಶ್ರೀನಿವಾಸರಾವ್ | ಬೆಂಗಳೂರು |
| 328 | ಕೆ. ರಾಘವೇಂದ್ರಾಚಾರ್ | ಹೊಸಪೇಟೆ |
| 1458 | ಜಿ.ಬಿ. ದೇಶಪಾಂಡೆ | ರಾಣೆಬೆನ್ನೂರು |
| 1302 | ಎ. ಭವಾನಿಮೂರ್ತಿ | ಮರಿಯಮ್ಮನಹಳ್ಳಿ |
| 1713 | ಜಿ.ಎನ್. ಮೇಲ್ಮನಿ | ಮುಂಬೈ |
| 805 | ವಿ.ಕೆ. ಬಾರ್ಗಿ | ಹುಬ್ಬಳ್ಳಿ |
| 1387 | ವಿ.ಆರ್. ಗುರುರಾಜ್ | ಬೆಂಗಳೂರು |
| 144 | ವಿ. ಗೋಪಾಲರಾವ್ | ಬೆಂಗಳೂರು |
| 807 | ಎಸ್.ಎನ್. ಹಿಟ್ನಾಳ್ | ಹುಬ್ಬಳ್ಳಿ |
| 974 | ಕೆ. ವೆಂಕಟರಾವ್ | ನಾರಾಯಣಪೇಟೆ |
| 205 | ಬಿ.ಜಿ. ಕುಲಕರ್ಣಿ | ಸೋಲಾಪುರ |
| 1995 | ಪಿ. ನರಹರಿ | ಬೆಂಗಳೂರು |
| 1189 | ಸಿ. ನಾಗರಾಜರಾವ್ | ಬೆಂಗಳೂರು |
| 851 | ಎಂ. ಗುರುರಾಜ ಭಟ್ | ತೆಕ್ಕಟ್ಟೆ |
| 733 | ಸಿ.ಕೆ. ಶ್ರೀನಿವಾಸರಾವ್ | ಬೆಂಗಳೂರು |
| 737 | ರಘೋತ್ತಮನ್ | ಬೆಂಗಳೂರು |
| 735 | ಹೆಚ್.ವಿ. ಶ್ರೀನಿಧಿ | ಬೆಂಗಳೂರು |
| 1566 | ಡಿ.ಜಿ. ದೇಸಾಯಿ | ಹೈದರಾಬಾದ್ |
| 1391 | ಟಿ.ಕೆ. ರಾಘವೇಂದ್ರರಾವ್ | ಶಿವಮೊಗ್ಗ |
| 1231 | ಕೆ.ಬಿ. ಕಟ್ಟಿ | ಬಾಗಲಕೋಟೆ |
| 1890 | ಪಿ.ಆರ್. ಶ್ರೀನಿವಾಸರಾವ್ | ಮುಂಬೈ |
| 1385 | ಅಡವಿರಾವ್ ಕುಲಕರ್ಣಿ | ಕುಷ್ಟಗಿ |

ನಮ್ಮ ಮನವಿಯಂತೆ ಸದಸ್ಯತ್ವ ನವೀಕರಣಕ್ಕಾಗಿ ಈ ಎಲ್ಲರಿಗೂ ಧನ್ಯವಾದಗಳು. ಇದರಂತೆಯೇ ಉಳಿದವರೂ ಸ್ವ-ಇಚ್ಛೆಯಿಂದ ರೂ. 250/- ಗಳನ್ನು ಕಳುಹಿಸಬೇಕಾಗಿ ಕೋರುತ್ತೇವೆ. ಮೃತರ ಹೆಸರಿನಲ್ಲಿ ಪತ್ರಿಕೆಯನ್ನು ಪಡೆಯುತ್ತಿರುವವರ ಮಾಹಿತಿ ಯಾರ ಬಳಿಯಾದರೂ ಇದ್ದಲ್ಲಿ ದಯವಿಟ್ಟು ನಮಗೆ ತಿಳಿಸಬೇಕಾಗಿ ಕೋರುತ್ತೇವೆ. - ಸಂ.

## ಪರ್ಯಟನ

### 'ಸುಜಯಶ್ರೀ' ಪ್ರಶಸ್ತಿ ಪ್ರದಾನ

ಮಂತ್ರಾಲಯ ಕ್ಷೇತ್ರದಲ್ಲಿ ದಿನಾಂಕ ೨೨-೦೧-೨೦೦೭ ರಂದು ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ, ಸನ್ಮಾನಿಸುವ ಕಾರ್ಯಕ್ರಮಕ್ಕೆ ಶ್ರೀಸುಶಮೀಂದ್ರತೀರ್ಥರು ಚಾಲನೆಯನ್ನು ನೀಡಿದರು. ಈ ಪ್ರಶಸ್ತಿಯು ಐದು ಸಾವಿರ ರೂ.ಗಳ ನಗದು ಹಾಗೂ ಸ್ಮರಣಿಕೆಯನ್ನು ಹೊಂದಿತ್ತು. ಉಭಯ ಶ್ರೀಪಾದಂಗಳವರು ಈ ಪ್ರಶಸ್ತಿಯನ್ನು ಪ್ರದಾನಮಾಡಿ ಹರಸಿದರು. ಪ್ರಶಸ್ತಿಭಾಜನರು :-

| | |
|---|---|
| • ವಿದ್ವಾನ್ ರಘೋತ್ತಮಾಚಾರ್ಯ, ಶ್ರೀರಂಗಂ | ಮಧ್ವಸಿದ್ಧಾಂತಸೇವೆ |
| • ವಿದ್ವಾನ್ ಸಲಾಕ. ರಘುನಾಥ ಶರ್ಮ, ರಾಜಮಂಡ್ರಿ | ಅದ್ವೈತಪಂಡಿತರು |
| • ವಿದ್ವಾನ್ ಸುಸ್ವರಂ. ನಾಗರಾಜಾಚಾರ್ಯ, ಆದೋನಿ | ಕೊಳಲು ವಿದ್ವಾಂಸರು |
| • ಶ್ರೀ ಸತ್ಯಸಾಯಿಪ್ರಸಾದ್, ಕರ್ನೂಲ್ | ಸಮಾಜಸೇವೆ |
| • ಶ್ರೀ ಆರ್.ಟಿ. ವಿಠ್ಠಲಮೂರ್ತಿ, ಬೆಂಗಳೂರು | ಪತ್ರಿಕೋದ್ಯಮ |
| • ಕುಮಾರಿ. ಯು.ಬಿ. ರಾಜಲಕ್ಷ್ಮಿ, ಉಡುಪಿ | ಪತ್ರಿಕೋದ್ಯಮ |
| • ಶ್ರೀ ಕೋರೂರು. ತಿರುಪತಿ ರೆಡ್ಡಿ, ಹೈದರಾಬಾದ್ | ವಾಸ್ತುಶಿಲ್ಪ |
| • ಡಾ. ಶ್ರೀನಿವಾಸ ರಿತ್ತಿ, ಧಾರವಾಡ | ಇತಿಹಾಸಜ್ಞರು |
| • ಡಾ. ಮಂಜುನಾಥ್, ಬೆಂಗಳೂರು | ಶಾಸನ ತಜ್ಞರು |
| • ಡಾ. ಗೋಪಾಲಕೃಷ್ಣ, ಬೆಂಗಳೂರು | ಶಾಸನ ತಜ್ಞರು |
| • ಡಾ. ಎಂ.ವಿ. ನಾಗರಾಜ್, ಬೆಂಗಳೂರು | ಇತಿಹಾಸಜ್ಞರು |
| • ಡಾ. ಎಸ್.ಜಿ. ನಾಡಗೌಡ, ಹುಬ್ಬಳ್ಳಿ | ನೇತ್ರತಜ್ಞರು |
| • ಡಾ. ಟಿ. ಪ್ರಭು, ಬೆಂಗಳೂರು | ಹೃದಯತಜ್ಞರು |
| • ಶ್ರೀ ಗುಲಾಬರಾವ್ ಘೋರ್ಪಡೆ, ಕೊಲ್ಲಾಪುರ | ಧಾರ್ಮಿಕ ಕ್ಷೇತ್ರ |
| • ಶ್ರೀ ಆರ್. ಸುರೇಂದ್ರನ್, ಕರೂರು | ಸಮಾಜಸೇವೆ |
| • ಶ್ರೀ ಅನಂತಪದ್ಮನಾಭರಾವ್, ಬೆಂಗಳೂರು | ಸಾಹಿತ್ಯ-ಸಂಸ್ಕೃತಿ |
| • ಶ್ರೀ ಕಲ್ಯಾಣ್, ಬೆಂಗಳೂರು | ಗೀತರಚನೆ-ಸಂಗೀತ |
| • ಶ್ರೀ ವೆಂಕಟೇಶ ಜೋಷಿ, ಬೆಂಗಳೂರು | ಕೈಗಾರಿಕಾ ಕ್ಷೇತ್ರ |
| • ಶ್ರೀ ಸಹಾರಾ. ರಮೇಶ್, ಬೆಂಗಳೂರು | ಗುರುಸೇವಾ |
| • ಶ್ರೀ ಸಂತಾನಂ, ತಿರುಚ್ಚಿ | ಸಮಾಜಸೇವೆ |
| • ಶ್ರೀ ಕೃಷ್ಣಾಚಾರ್, ಹುಣಸೂರು | ಸಂಘಟನೆ |
| • ಶ್ರೀ ಮನ್ನಾಲಿ ವೆಂಕಯ್ಯ ಶೆಟ್ಟಿ, ಮಾನ್ವಿ | ಗುರುಸೇವಾ |



### ಮಂತ್ರಾಲಯದಲ್ಲಿ ವಿಶ್ವಶಾಂತಿಗಾಗಿ ಹೋಮ

ಮಂತ್ರಾಲಯ ಕ್ಷೇತ್ರದಲ್ಲಿ ದಿನಾಂಕ ೨೪-೦೧-೨೦೦೭ ರಿಂದ ೨೬-೦೧-೨೦೦೭ ರವರೆಗೆ ಉಭಯ ಶ್ರೀಪಾದಂಗಳವರು ವಿಶ್ವಶಾಂತಿಗಾಗಿ 'ಶ್ರೀಕರ ಲಕ್ಷ್ಮೀ ಅಷ್ಟಾಕ್ಷರ' ಮತ್ತು 'ಮನ್ಯುಸೂಕ್ತ' ಹೋಮಗಳನ್ನು ನೆರವೇರಿಸಿದರು. ಮೂರು ದಿನಗಳ ಪರ್ಯಂತ ನಡೆದ ಈ ಹೋಮದಲ್ಲಿ ನೂರಾರು ಜನ ಋತ್ವಿಜರು ಪಾಲ್ಗೊಂಡು ಯಜ್ಞವನ್ನು ನೆರವೇರಿಸಿದರು.

### ಹೀಗೊಂದು ಪ್ರಾಚೀನ ಶೈಲಿಯ ಸುಧಾಮಂಗಳ

ಭವ್ಯವಾದ ಸಭಾಭವನದಲ್ಲಿ ಎತ್ತರವಾದ ವೇದಿಕೆಯಲ್ಲಿ ಪರಮಪೂಜ್ಯ ಶ್ರೀಸುಶಮೀಂದ್ರತೀರ್ಥರು ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ವಿರಾಜಮಾನರಾಗಿ ಕುಳಿತು ಸುಧಾಮಂಗಳವನ್ನು ನೆರವೇರಿಸುವಂತೆ ಮಂತ್ರಾಲಯ ಮಠದ ವಿದ್ಯಾಪೀಠದ ವಿದ್ಯಾರ್ಥಿಯಾದ ಕನಕಾಚಲ ಒಡೆಯರ್‌ರಿಗೆ ಆದೇಶವೀಯುತ್ತಿದ್ದಂತೆಯೇ ಮಂಗಳ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಒಂದು ಭಾಗದಲ್ಲಿ ಕನಕಾಚಲ ಒಡೆಯರ್ ಕುಳಿತು ಅನುವಾದವನ್ನು ಪ್ರಾರಂಭಿಸಿದರು. ಅವರ ಮುಂಭಾಗದಲ್ಲಿ ಕುಳಿತಿದ್ದ ಮಧ್ವಮತದ ದಿಗ್ಗಜಗಳಾದ ಪ್ರೊ. ಡಿ. ಪ್ರಹ್ಲಾದಾಚಾರ್ಯ, ವಿದ್ವಾನ್ ಶ್ರೀ ಹರಿದಾಸ ಭಟ್, ವಿದ್ವಾನ್ ಶ್ರೀ ಫಂಡರೀನಾಥಾಚಾರ್ಯ ಗಲಗಲಿ, ವಿದ್ವಾನ್ ಶ್ರೀ ನರಸಿಂಹಾಚಾರ್ಯ ಪುರೋಹಿತ್, ವಿದ್ವಾನ್ ಶ್ರೀ ಶೇಷಗಿರಿಯಾಚಾರ್ಯ, ವಿದ್ವಾನ್ ಶ್ರೀ ಶ್ರೀನಿವಾಸ ವರ್ಖೇಡಿ, ವಿದ್ವಾನ್ ಶ್ರೀ ಹಯವದನ ಪುರಾಣಿಕ್, ವಿದ್ವಾನ್ ಶ್ರೀ ಪುರಾಣಿಕ ಸುಬ್ರಹ್ಮಣ್ಯಾಚಾರ್ಯ ಹಾಗೂ ತಿರುಪತಿಯಿಂದ ಆಗಮಿಸಿದ ವಿದ್ವಾನ್ ಶ್ರೀ ವೇದಾಂತದೇಶಿಕಾಚಾರ್ಯರು ಸುಧಾದಲ್ಲಿನ ಅನೇಕ ವಿಷಯಗಳನ್ನು ಪ್ರಶ್ನಿಸುತ್ತಿದ್ದರು. ಎಲ್ಲ ಪ್ರಶ್ನೆಗಳಿಗೂ ಸಮಂಜಸವಾಗಿ ಉತ್ತರಗಳನ್ನು ನೀಡುತ್ತಾ ಮುನ್ನಡೆದ ಸುಧಾಮಂಗಳದಲ್ಲಿ ತಿರುಪತಿಯಿಂದ ಆಗಮಿಸಿದ ವಿದ್ವಾನ್ ವೇದಾಂತದೇಶಿಕಾಚಾರ್ಯರು ಎಡಬಿಡದೆ ಕೇಳಿದ ಎಲ್ಲ ಪ್ರಶ್ನೆಗಳಿಗೂ ಅಳುಕದೆ ಉತ್ತರವನ್ನೀಯುತ್ತ, ವಿದ್ವಾಂಸರ ಪ್ರಶಂಸೆಗೆ ಕನಕಾಚಲ ಒಡೆಯರ್ ಪಾತ್ರರಾದರು. ಇತ್ತೀಚಿನ ದಿನಗಳಲ್ಲಿ ಸುಧಾಮಂಗಳವು ಕೇವಲ ಅನುವಾದದ ರೂಪದಲ್ಲಷ್ಟೇ ನಡೆಯುತ್ತಿದ್ದು, ಈ ಸುಧಾಮಂಗಳವು ಪ್ರಾಚೀನ ಶೈಲಿಯಲ್ಲಿ ಗುರುಕುಲಗಳಲ್ಲಿ ವಿದ್ಯಾರ್ಥಿಗಳನ್ನು ಗುರುಗಳು ನಾನಾ ವಿಧಗಳಿಂದ ಪರೀಕ್ಷಿಸುತ್ತಿದ್ದಂತೆ ಪರೀಕ್ಷಿಸಿದ್ದು ವಿಶೇಷವಾಗಿತ್ತು. ಎಲ್ಲ ವಿದ್ವಾಂಸರ ಪ್ರಶ್ನೆಗಳಿಗೆ ಕಣ್ಣಿನಲ್ಲಿ ಕಣ್ಣಿಟ್ಟು ಉತ್ತರವನ್ನು ನೀಡುತ್ತಿರುವ ಮಂತ್ರಾಲಯ ಮಠದ ಈ ವಿದ್ಯಾರ್ಥಿ ಶ್ರೀಮಠದ ಉತ್ತಮವಾದ ಆಸ್ತಿಯಾಗಿ ರೂಪುಗೊಳ್ಳಲಿದ್ದಾನೆ ಎಂದು ವಿದ್ವಾಂಸರಾದ ಹರಿದಾಸ ಭಟ್ ಹಾಗೂ ವಿದ್ವಾನ್ ಶ್ರೀನಿವಾಸ ವರ್ಖೇಡಿಯವರು ತಮ್ಮ ಉಪನ್ಯಾಸದಲ್ಲಿ ನುಡಿದರು.

**ವರದಿ : ಸೂರೀಂದ್ರ**